ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 17 ಜುಲೈ 8, 1979 40 ಪೈಸೆ

ಇಂದಿರಾ ಹಾದಿಯಲ್ಲಿ

ತನ್ನ ಸರಕಾರವು ಹೊಸ ಸ್ಥಾನಬದ್ಧತೆ ಶಾಸನವನ್ನು ಜಾರಿಗೆ ತರುವುದರ ಬಗ್ಗೆ ಯೋಚಿಸುತ್ತಿದೆ ಎಂಬುದಾಗಿ ಪ್ರಧಾನಮಂತ್ರಿ ಮೊರಾರ್ಜಿ ದೇಸಾಯಿಯವರು ಜೂನ್ 25 ರಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿರುವುದು, ಜನತಾಪಕ್ಷದ ಸರಕಾರವು ಎತ್ತಸಾಗುತ್ತಲಿದೆ ಎಂಬುದಕ್ಕೆ ಮುನ್ಸೂಚಿಯಾಗಿದೆ. ಆದರೆ, ಇದು ತುರ್ತುಪರಿಸ್ಥಿತಿ ಕಾಲದ "ಮೀಸಾ" ಮಾದರಿಯ ಭಯಾನಕ ಶಾಸನದ ಪುನರುಜ್ಜೀವನ ಅಲ್ಲ ಎಂದಿರುವ ಮೊರಾರ್ಜಿಯವರು "ಮೀಸಾ" ದಂತಲ್ಲದೆ ಮುನ್ನೆಚ್ಚರಿಕೆಯ ಸ್ಥಾನಬದ್ಧತೆಯ ಕಾಯ್ದೆಗೆ ನ್ಯಾಯಾಂಗದ ಪೂರ್ಣ ರಕ್ಷಣೆ ಇರುತ್ತದೆ ಎಂದೂ ಹೇಳಿದರು. ಕಾನೂನು ಮತ್ತು ಶಾಂತಿಪಾಲನೆಗೆ ಬೆದರಿಕೆ ಉಂಟುಮಾಡುವ ಚಳುವಳಿಗಳ ವಿರುದ್ಧ ಉಗ್ರಕ್ರಮ ಕೈಗೊಳ್ಳಲು ಸರ್ಕಾರ ದೃಢನಿರ್ಧಾರ ಮಾಡಿದೆ ಎಂದೂ ಪ್ರಕಟಿಸಿದರು.

ಈ ರೀತಿ ತುರ್ತುಪರಿಸ್ಥಿತಿಗೆ ಮೊದಲಿನ ಸ್ಥಾನಬದ್ಧತೆ ಕಾಯ್ದೆ ಮತ್ತು ತುರ್ತುಪರಿಸ್ಥಿತಿಯ ಮೀಸಾ ಆಡಳಿತೆಗೂ ಮತ್ತು ತಾನು ತರಬಯಸುವ ಸ್ಥಾನಬದ್ಧತೆ ಕಾಯ್ದೆಗೂ ವ್ಯತ್ಯಾಸವನ್ನು ತೋರಿಸಲು ಯತ್ನಿಸುವ ಮೊರಾರ್ಜಿಯವರ ಮಾತಿಗೆ ಯಾರೂ ಮೋಸ ಹೋಗಲಾರರು.

ಹಿಂದಿನ ಕಾಂಗ್ರೆಸ್ ಸರಕಾರವು ಬ್ರಿಟೀಷರು ಎರಡನೆ ಜಾಗತಿಕ ಮಹಾಯುದ್ಧದ ಕಾಲದ ಈ ಕಾಯ್ದೆಯನ್ನು ಅನುಸರಿಸುತ್ತಾ ಬಂದದ್ದರ ವಿರುದ್ಧ

ಸಂಪಾದಕೀಯ

ಪ್ರಜಾಪ್ರಭುತ್ವವಳಿಯು ಇದನ್ನು ವಿರೋಧಿಸುತ್ತಾ ಬಂದಿದೆ. ಪಾರ್ಲಿಮೆಂಟಿನಲ್ಲೂ ವಿರೋಧಿಸಲಾಗಿದೆ. ಕಾರ್ಮಿಕ ಚಳುವಳಿ, ರೈತ ಚಳುವಳಿ ಮತ್ತು ಪ್ರಜಾಪ್ರಭುತ್ವ ಹೋರಾಟಗಳಿಗೆ ಈ ಕಾಯ್ದೆಯ ಪರಿಣಾಮದ ಸಾಕಷ್ಟು ಅನುಭವವಾಗಿದೆ. ಈ ಕಾಯ್ದೆಯನ್ನು ಆಳುವವರ್ಗದ ಹಿತಕ್ಕಾಗಿಯೂ, ಅಧಿಕಾರದಲ್ಲಿರುವ ರಾಜಕೀಯ ಪಕ್ಷದ ಸ್ವಹಿತಕ್ಕಾಗಿಯೂ ಹೇಗೆ ನಿಧಾನವಾಗಿ ಬಳಸಲಾಗುವುದು ಎಂಬುದರ ಬಗ್ಗೆಯೂ ನಮ್ಮ ಹಿಂದಿನ ದಿನಗಳ ಅನುಭವವೇ ಹೇಳುತ್ತಿದೆ. ಆದುದರಿಂದಲೇ ವಿಚಾರಣೆ ಇಲ್ಲದೆ ಬಂಧನದಲ್ಲಿ ಇಡಲೇಬಾರದೆಂದು ಪ್ರಜಾಪ್ರಭುತ್ವ ಚಳುವಳಿಯು ಒತ್ತಾಯಿಸುತ್ತಾ ಬಂದಿದೆ.

ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟು ಅಧಿಕವಾದಂತೆಲ್ಲಾ, ಜನತೆಯ ಹೋರಾಟವನ್ನು ಹತ್ತಿಕ್ಕಲು ಆಳುವವರ್ಗ ಅನುಸರಿಸುವ ತಂತ್ರವು ಇದಾಗಿದೆ. ಇಂದಿರಾಗಾಂಧಿ ಕಾಂಗ್ರೆಸ್ಸಿನ ವರ್ಗಧೋರಣೆಯನ್ನು ಅನುಸರಿಸುವ ಜನತಾಪಕ್ಷದ ಈ ಕ್ರಮವು ಕಾರ್ಯಗತವಾದರೆ, ಸರ್ವಾಧಿಕಾರ ವಿರೋಧ ಚಳುವಳದಿಂದ ಅಧಿಕಾರಕ್ಕೆ ಬಂದ ಜನತಾಪಕ್ಷದ ಸರಕಾರವು ಜನತೆಗೆ ಕೊಟ್ಟ ಭರವಸೆಯನ್ನು ಮರೆತಂತಾಗುವುದು. ಸರ್ವಾಧಿಕಾರ ಚೌಕಟ್ಟನ್ನು ಹತ್ತಿಕ್ಕುವ ಬದಲು ಅದನ್ನು ಬಲಪಡಿಸಿದಂತಾಗುವುದು. ಆದುದರಿಂದಲೇ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಮತ್ತು ವ್ಯಕ್ತಿಗಳು ಹೊಸ ಸ್ಥಾನಬದ್ಧತೆ ಶಾಸನ ತರುವ ಪ್ರಯತ್ನವನ್ನು ವಿರೋಧಿಸುವುದು ಮತ್ತು ಇದು ಜಾರಿಗೆ ಬರದಂತೆ ತಡೆಯುವುದು ಆದ್ಯ ಕರ್ತವ್ಯವಾಗಿದೆ.

ಭೂಮಿಗಾಗಿ ಹೋರಾಡಲು ಪ್ರಾಂತ ರೈತಸಂಘದ ಕರೆ

"ಹಳ್ಳಿಯ ಬಡವರ ಸಮಸ್ಯೆಗಳ ಪರಿಹಾರ ಭೂಮಿಯ ಪ್ರಶ್ನೆಗೆ ಪರಿಹಾರ ಹುಡುಕುವುದರಿಂದ ಮಾತ್ರ ಸಾಧ್ಯ; ಭೂಮಿಗಾಗಿ ಹಸಿದಿರುವ ಭೂಹೀನರಿಗೆ ಭೂಮಿ ದೊರಕಿಸಿಕೊಡಲು ಮತ್ತು ಹಳ್ಳಿಯ ಬಡವರ ಇರುವ ಭೂಮಿಯನ್ನು ಉಳಿಸಿಕೊಳ್ಳಲು ರಾಜ್ಯದಾದ್ಯಂತ ಹೋರಾಟ ನಡೆಸಲು ಮುಂದಾಗಲು" ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯಸಮಿತಿಯು ಕರೆಯಿತ್ತಿದೆ. ತಾರೀಕು 29-6-79 ಮತ್ತು 30-6-79 ರಂದು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಸಭೆ ಸೇರಿದ್ದ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಹಳಿಯಾಳದ ಭೂಸ್ವಾಧೀನ ಹೋರಾಟದ ವಿಮರ್ಶೆ ನಡೆಸುತ್ತಾ, ಹಳ್ಳಿಯ ಬಡವರ ಮುಖ್ಯ ಪ್ರಶ್ನೆಯನ್ನು ತೆಗೆದುಕೊಂಡು ರಾಜ್ಯದಾದ್ಯಂತ ಹೋರಾಟ ನಡೆಸುವ ಅವಶ್ಯಕತೆಯನ್ನು ಮನಗಾಣಲಾಯಿತು. ಹಳಿಯಾಳದಲ್ಲಿ ಪ್ರಾರಂಭವಾಗಿರುವ ಭೂಸ್ವಾಧೀನ ಚಳುವಳಿಯನ್ನು ಮೊದಲನೆಯದಾಗಿ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಮತ್ತು ಎರಡನೆಯದಾಗಿ ರಾಜ್ಯದಾದ್ಯಂತ ಪಸರಿಸಬೇಕೆಂದೂ, ರೈತ ಸಂಘಟನೆ ಈ ದಿಸೆಯಲ್ಲಿ ತಯ್ಯಾರಿ ನಡೆಸಬೇಕೆಂದೂ ಸಮಿತಿಯು ಅಭಿಪ್ರಾಯಪಟ್ಟಿತು. ಬಂಡವಾಳಶಾಹಿ ಪದ್ಧತಿಯನ್ನು ಬೆಳೆಸಲು ಭೂಮಾಲಕ-ಬಂಡವಾಳಶಾಹಿ ವ್ಯವಸ್ಥೆಯ ಆಳುವ ವರ್ಗಗಳು ಪ್ರಯತ್ನಿಸುವುದರ ಫಲವಾಗಿ ಹಳ್ಳಿಯ ಬಡವರ ಸಮಸ್ಯೆಗಳು ದಿನೇ ದಿನೇ ಹೆಚ್ಚುತ್ತಲಿವೆ. ಭೂಮಿಯನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿರುವ ಬಡ ಮತ್ತು ಮಧ್ಯ ರೈತರ ಭೂಮಿಯನ್ನು ಉಳಿಸುವುದು, ಭೂಹೀನರಿಗೆ ಭೂಮಿ ದೊರಕಿಸುವುದು, ಕೃಷಿಕೂಲಿಗಾರರಿಗೆ ಹೆಚ್ಚಿನ ವೇತನ ದೊರಕಿಸುವುದು, ಬಡ ಮಧ್ಯಮ ರೈತರ ಬೆಳೆಗಳಿಗೆ ನ್ಯಾಯವಾದ ಬೆಲೆ ದೊರಕಿಸುವುದು ಮೊದಲಾದ ಕೆಲವು ಮೂಲಭೂತ ಸಮಸ್ಯೆಗಳನ್ನು ಮುಂದಿಟ್ಟು ಹಳ್ಳಿಯ ಬಡವರ ವಿಶಾಲ ಒಗ್ಗಟ್ಟನ್ನು ಬೆಳೆಸಲು ಸಾಧ್ಯವಾಗುವಂತೆ ಹೋರಾಟವನ್ನು ಮುಂದೊಯ್ಯಬೇಕು. ರೈತಸಂಘದ ನಾಯಕತ್ವವು ಹಳ್ಳಿಯ ಶ್ರೀಮಂತ ವಿಭಾಗಕ್ಕೆ ಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದು ಸಮಿತಿಯು ಅಭಿಪ್ರಾಯಪಟ್ಟಿತು.

ಕಾಂ. ಎಚ್. ಮುಗವಾಳಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಕಾರ್ಯಕಾರಿ ಸಮಿತಿಯು ಸಂಘಟನೆಯ ಬಗ್ಗೆ ಚರ್ಚೆ ನಡೆಸಿ 1979 ಡಿಸೆಂಬರ್ ಕೊನೆಯೊಳಗೆ ಎಲ್ಲಾ ಜಿಲ್ಲೆಗಳಲ್ಲೂ, ಜಿಲ್ಲಾ ಮಟ್ಟದಲ್ಲಿ ಸಾಧ್ಯವಿಲ್ಲದೆಡೆ ಸ್ಥಳೀಯವಾಗಿಯೂ ರೈತಸಂಘದ ಸಮ್ಮೇಳನಗಳನ್ನು ನಡೆಸಲು ತೀರ್ಮಾನಿಸಿತು. ಸದಸ್ಯತ್ವವನ್ನು ಸೇರಿಸುವುದಕ್ಕೆ ಆದ್ಯತೆಯನ್ನಿತ್ತು ಈ ವರ್ಷ ಒಂದು ಲಕ್ಷ ಸದಸ್ಯತ್ವವನ್ನು ಸೇರಿಸಲು ಶ್ರಮಿಸಬೇಕೆಂದು ಅಧ್ಯಕ್ಷರು ಸೂಚಿಸಿದರು. ಹಳಿಯಾಳ ಗೋಲಿಬಾರಿನಲ್ಲಿ ಜೀವತೆತ್ತ ಮಾರುತಿ ಗಣೇಶ ಪವಾರ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದ ಕಾರ್ಯಕಾರಿ ಸಮಿತಿಯು, ಅವರ ಕುಟುಂಬಕ್ಕೆ ನೆರವಾಗಲು ಮತ್ತು ಹಳಿಯಾಳ ರೈತರ ಹೋರಾಟಕ್ಕೆ ಸಹಾಯ ನೀಡಲು ರಾಜ್ಯದಾದ್ಯಂತ ನಿಧಿಯೆತ್ತುವ ತೀರ್ಮಾನ ಮಾಡಿತು. ಹಳಿಯಾಳ ತಾಲ್ಲೂಕಿನಾದ್ಯಂತ 144 ಸೆಕ್ಷನ್ ಅನ್ವಯ ಪ್ರತಿಬಂಧಕಾಜ್ಞೆ ಜಾರಿಯಲ್ಲಿರುವುದನ್ನು ಖಂಡಿಸಿದ ರಾಜ್ಯ ಸಮಿ

(ಕಡೆಯ ಪುಟ ನೋಡಿ)

ಭಾರತ ಕಮ್ಯುನಿಸ್ಟ್ ಪಕ್ಷದಿಂದ ಸಾಮೂಹಿಕವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ:

ಇಂದಿರಾ ಕಾಂಗ್ರೆಸ್ ಹೇಗೆ ನುಚ್ಚುನೂರಾಗುತ್ತ ಬಂದಿದೆಯೋ, ಹಾಗೆಯೇ ಇಂದಿರಾ ಕಾಂಗ್ರೆಸ್ಸನ್ನು ಅಂಟಿಕೊಂಡುಬಂದ ಬಲಕಮ್ಯುನಿಸ್ಟ್ ಪಕ್ಷವೂ ನುಚ್ಚುನೂರಾಗುತ್ತಲಿದೆ ಎಂದು ಬಂಟ್ವಾಳ ಪುರಸಭೆಯ ಮಾಜಿ ಉಪಾಧ್ಯಕ್ಷ ಮತ್ತು ಸಿ. ಪಿ. ಐ. ಯ ಸದಸ್ಯರಾಗಿದ್ದ ಜನಪ್ರಿಯ ಮುಂದಾಳು ಕಾಂ. ಮಂಜುನಾಥ ಸಫಲ್ಯ ಅವರು 1-7-79 ರಂದು ಬಂಟ್ವಾಳ ಯಶವಂತ ವ್ಯಾಯಾಮ ಶಾಲೆಯ ಆವರಣದಲ್ಲಿ ಮಧ್ಯಾಹ್ನ 12 ಗಂಟೆಗೆ ಸೇರಿದ್ದ ಕಿಕ್ಕಿರಿದ ಸಭೆಯಲ್ಲಿ ಸಾರಿದರು. ಭಾರತ ಕಮ್ಯುನಿಸ್ಟ್ ಪಕ್ಷದ ಬೆಂಬಲಿಗರಾಗಿದ್ದ ಮತ್ತು ಅವರ ಕಾರ್ಮಿಕ ಸಂಘಟನೆಗಳಲ್ಲಿದ್ದ ಸುಮಾರು ಏಳುನೂರಐವತ್ತು ಮಂದಿ, ಮುಖ್ಯವಾಗಿ ಬೀಡಿ ಕೆಲಸಗಾರರು ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸಿ. ಪಿ. ಐ. ಯ ಸಂದರ್ಭಸಾಧಕ ನೀತಿಯಿಂದ ಬೇಸತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಬೆಂಬಲಿಸಲು ಮತ್ತು ಅದಕ್ಕೆ ಸೇರಲು ತೀರ್ಮಾನಿಸಲು ಸಭೆ ಸೇರಿದ್ದರು. ಸಭೆ ಸೇರುವುದಕ್ಕೆ ಮೊದಲು ನೂರಾರು ಜನ ಸೇರಿದ್ದ ಮೆರವಣಿಗೆಯು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಜಯವಾಗಲಿ ಎಂದು ಘೋಷಿಸುತ್ತಾ ಬಂಟ್ವಾಳ ನಗರದ ಮುಖ್ಯ ಬೀದಿಗಳಲ್ಲಿ ಸುತ್ತಾಡಿತು. ಇತ್ತೀಚಿನ ದಿನಗಳಲ್ಲಿ ನಡೆದ ಮೆರವಣಿಗೆಯಲ್ಲಿ ಇದು ಅತೀ ದೊಡ್ಡದಾಗಿದ್ದು, ಅಭೂತಪೂರ್ವ ದೃಶ್ಯವಾಗಿತ್ತು.

ತಾನು 1952 ರಿಂದಲೇ ಪಕ್ಷದಲ್ಲಿ ದುಡಿದಿರುವುದಾಗಿಯೂ, ಪಕ್ಷದ ಸಂದರ್ಭಸಾಧಕ ನೀತಿ ಮತ್ತು ಭ್ರಷ್ಟಾಚಾರದ ಬಗ್ಗೆ ಪ್ರಶ್ನಿಸಿದ್ದಕ್ಕೆ ತಾನು ಮತ್ತು ಇತರ ಮುಖ್ಯ ಆರು ಮಂದಿಯನ್ನು ದೂರವಿರಿಸಲು ಪ್ರಯತ್ನಿಸಲಾಯಿತೆಂದೂ ಆಪಾದಿಸಿದ ಕಾಂ. ಮಂಜುನಾಥ ಸಫಲ್ಯ ಅವರು ನೀವು, ಅಂದರೆ ಇಲ್ಲಿ ಸೇರಿದ್ದ ಜನತೆಯು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಸೇರುವ ಬಗ್ಗೆ ತೀರ್ಮಾನಿಸಬೇಕು ಎಂದು ಕರೆಯಿತ್ತರು. ಸಂದರ್ಭಸಾಧಕರಿಗೆ ನಾವು ಸವಾಲೊಡ್ಡಬೇಕಾಗಿದೆ ಎಂದು ಘೋಷಿಸಿದರು. ಸ್ವಂತ ಕಾಲಮೇಲೆ ನಿಲ್ಲಲಾರದ ಸಿ. ಪಿ. ಐ. ಯನ್ನು ತ್ಯಜಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಸೇರೋಣ ಎಂದಾಗ ಸಭಿಕರು ಪ್ರಚಂಡ ಕರತಾಡನ ಮಾಡಿದರು.

ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಸಿ. ಪಿ. ಐ. ಯ ಬಂಟ್ವಾಳ ತಾಲ್ಲೂಕು ಸಮಿತಿಯ ಸದಸ್ಯರಾಗಿದ್ದ ಕಾಂ. ಬಿ. ಹೆಚ್. ಬಂಗೇರನವರು ಬಲ ಕಮ್ಯುನಿಸ್ಟರು ಹೋರಾಟದ ಪಥವನ್ನು ಬಿಟ್ಟುದುದರಿಂದ ಕಾರ್ಮಿಕರ ಸಮಸ್ಯೆಗಳು ಹಾಗೆಯೇ ಉಳಿದಿವೆಯೆಂದರು. ಮುಖಂಡತ್ವದ ತಪ್ಪುಗಳ ಬಗ್ಗೆ ಮಾತನಾಡಿದಾಗ ನಮ್ಮನ್ನು ಮೋಸಗಾರರೆಂದು ಪ್ರಚಾರ ಮಾಡಿ ದೂರವಿಡಲು ಯತ್ನಿಸಿದರೂ ನೀವು (ಸಭಿಕರನ್ನುದ್ದೇ

(ಕಡೆಯ ಪುಟ ನೋಡಿ)

"ಧಾರ್ಮಿಕ ಸ್ವಾತಂತ್ರ್ಯ" ಮಸೂದೆಯ ಬಗ್ಗೆ ವಿಚಾರಗೋಷ್ಠಿ

"ಧಾರ್ಮಿಕ ಅಲ್ಪಸಂಖ್ಯಾತರ ರಕ್ಷಣೆ ಆ ಕೋಮಿಗೆ ಸೇರಿದವರಿಗೆ ಸಂಬಂಧಿಸಿದ ವಿಚಾರವಷ್ಟೇ ಅಲ್ಲ, ಇಡೀ ಪ್ರಜಾಪ್ರಭುತ್ವವಾದಿ ಚಳುವಳಿಗೆ ಸೇರಿದ ವಿಚಾರವಾಗಿದೆ. ಆದ್ದರಿಂದ ಅಲ್ಪಸಂಖ್ಯಾತರು ಇಡಿ ಪ್ರಜಾಪ್ರಭುತ್ವವಾದಿ ಚಳುವಳಿಯ ಜೊತೆ ಸೇರದೆ ತಮಗೆ ತಾವೇ ಸಂಘಟಿತರಾಗುವುದು ತಪ್ಪು" ಎಂದು ಇ. ಎಂ. ಎಸ್. ನಂಬೂದಿರಿಪಾದರು ಮೇ 24 ರಂದು ತಿರುವನಂತಪುರದಲ್ಲಿ ಹೇಳಿದರು.

ಲೋಕಸಭೆಯಲ್ಲಿ ಓ. ಪಿ. ತ್ಯಾಗಿಯವರು ಮುಂದೂಡಿದ "ಧಾರ್ಮಿಕ ಸ್ವಾತಂತ್ರ್ಯ" ಖಾಸಗಿ ಸದಸ್ಯರ ಮಸೂದೆಯ ಬಗ್ಗೆ ಕೇರಳ ವಿಶ್ವವಿದ್ಯಾಲಯ ವಿದ್ಯಾರ್ಥಿಸಂಘದವರು ಏರ್ಪಡಿಸಿದ್ದ ವಿಚಾರಗೋಷ್ಠಿಯೊಂದರಲ್ಲಿ ಅವರು ಭಾಗವಹಿಸಿದ್ದರು. ಈ ಕೆಲವು ವಾರಗಳಲ್ಲಿ ವಿದ್ಯಾರ್ಥಿಸಂಘವು ನಡೆಸಿದ ಎರಡನೇ ವಿಚಾರಗೋಷ್ಠಿ ಇದಾಗಿತ್ತು. ಮೊದಲನೆಯದು ಏಪ್ರಿಲ್‌ನಲ್ಲಿ ಗೋವಧೆಯ ಬಗ್ಗೆ ನಡೆದಿತ್ತು.

ಸಭೆಯಲ್ಲಿ ಭಾಗವಹಿಸಿದವರ ಪೈಕಿ ತಿರುವನಂತಪುರದ ಕ್ಯಾಥೋಲಿಕ್ ಚರ್ಚ್‌ನ ಆರ್ಚ್‌ಬಿಷಪ್ ಸಹ ಇದ್ದರು. ಸಭೆಯು ಕಿಕ್ಕಿರಿದು ತುಂಬಿ ಹೊರಗೆ ಸಹ ಜನರು ನಿಂತು ಕೇಳುತ್ತಿದ್ದರು.

ತನ್ನ ಧರ್ಮವನ್ನು ಬೋಧಿಸಿ, ಆಚರಿಸಿ, ಅದರ ಬಗ್ಗೆ ಹೊಗಳುವುದು ಪ್ರತಿ ಅಲ್ಪಸಂಖ್ಯಾತ ಧರ್ಮದ ಹಕ್ಕು ಎಂದು ಆರ್ಚ್‌ಬಿಷಪ್ ತಮ್ಮ ಚರ್ಚಿನ ನಿಲುವನ್ನು ಪ್ರತಿಪಾದಿಸಿದರು. "ಒತ್ತಾಯದ" ಅಥವಾ "ವಂಚನೆಯ" ಮತಾಂತರಗಳು ಮಾತ್ರ ನ್ಯಾಯಬಾಹಿರ ಎಂದು ಸರ್ಕಾರ ಹೇಳಿದೆ. ಆದರೆ ನಿಮ್ನವರ್ಗ ಮತ್ತು ಜಾತಿಗಳವರಿಗೆ ಅನೇಕಾನೇಕ ಸವಲತ್ತುಗಳನ್ನು ಸರ್ಕಾರ ನೀಡುತ್ತಿದೆ. ಆದರೆ ಇವರು ಬೇರೆ ಯಾವುದಾದರೂ ಮತಕ್ಕೆ ಪರಿವರ್ತಿತರಾದ ಕೂಡಲೇ ಅವನ್ನು ನಿಲ್ಲಿಸಲಾಗುತ್ತದೆ. ಅವರು ಹಿಂದೂಗಳೇ ಆಗಿ ಉಳಿಯಲೆಂದು ಅನುಸರಿಸುವ "ವಂಚನೆಯ" ಸಾಧನ ಇದಲ್ಲವೇ ಎಂದು ಅವರು ವಾದಿಸಿದರು.

ಮೊದಲು ತ್ಯಾಗಿ ಮಸೂದೆಯನ್ನು ಬೆಂಬಲಿಸಿದ ಪ್ರೊಫೆಸರ್ ಮಾಥ್ಯೂ ಅವರು ಪ್ರತಿ ದೇಶಕ್ಕೂ ತನ್ನದೇ ಆದ ಧರ್ಮ ಇದೆ. ಭಾರತಕ್ಕೆ ಇರುವುದು ಹಿಂದೂ ಧರ್ಮವೊಂದೇ, ಬೇರೆ ಧರ್ಮಗಳು ಅಲ್ಲ ಎಂಬ ಪಕ್ಕಾ ಜನಸಂಘೀಯ ನಿಲುವನ್ನು ಒತ್ತಿ ಹೇಳಿದರು. ಕೊನೆಗೆ ಇತರ ಸಂಸ್ಕೃತಿಗಳ ಆಕ್ರಮಣದಿಂದ ಭಾರತೀಯ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದಕ್ಕೆ ತರಲಾದ "ರಹಸ್ಯ ಆಯುಧ"ವೇ ಈ ಮಸೂದೆ ಎಂಬುದನ್ನು ಅವರು ಒಪ್ಪಿಕೊಂಡರು.

ಕೇರಳದ ಶ್ರೇಷ್ಠನ್ಯಾಯಾಲಯದ ಪ್ರಸಿದ್ಧ ನ್ಯಾಯವಾದಿ ಎಂ. ಎಂ. ಚೆರಿಯನ್ ಅವರು ಇದನ್ನು ಜಾತ್ಯತೀತ ದೃಷ್ಟಿಕೋನದಿಂದ ತಾವು ನೋಡುತ್ತೇವೆಂದೂ ಆದರೆ ಈ ಮಸೂದೆಯ ಅಂಶಗಳು ಎಲ್ಲ ಭಾರತೀಯ ಪ್ರಜೆಗಳ ಪ್ರಜಾಪ್ರಭುತ್ವವಾದಿ ಹಕ್ಕುಗಳ ರಕ್ಷಣೆ ಮಾಡುವಹಾಗಿಲ್ಲವೆಂದೂ ವಿವರಿಸಿದರು.

ಚೆರಿಯನ್ ವಸ್ತುವಾದಿಯಾದರೂ ಅವರ ಸೋದರ ಡಾ. ಎಂ. ಎಂ. ಥಾಮಸ್ ಅವರು, ತಾವು ಧಾರ್ಮಿಕ ಮನೋಭಾವದವರೆಂದು ಹೇಳಿ, ತಾವು ಇದನ್ನು ಒಬ್ಬ ಸಮಾಜಶಾಸ್ತ್ರಜ್ಞನ ದೃಷ್ಟಿಯಿಂದ ನೋಡುತ್ತೇವೆಂದು ಹೇಳಿದರು.

ಸಮಾಜ ಎಲ್ಲೆಡೆ ಬದಲಾಗುತ್ತಿದೆ. ಭಾರತದಲ್ಲೂ ಆಗುತ್ತಿದೆ. ಆದರೆ ಈ ಮಸೂದೆ ಸಾಮಾಜಿಕ ಬದಲಾವಣೆಯನ್ನು ತಡೆಯಲು ಉದ್ದೇಶಿಸಿದೆ ಎಂದರು. ನಂತರ ಆರ್ಚ್‌ಬಿಷಪ್ಪರ ಕಡೆಗೆ ತಿರುಗಿ "ನೀವೇನೂ ಯೋಚಿಸಬೇಡಿ, ನಿಮ್ಮ ಮನಸ್ಸಿನಲ್ಲಿರುವುದನ್ನೇ ಮಸೂದೆಯೂ ಉದ್ದೇಶಿಸಿದೆ" ಎಂದು ಹೇಳಿದರು. ಭಾರತ ಸಮಾಜವನ್ನು ಸಾಮಾಜಿಕ ಬದಲಾವಣೆಯಿಂದ ತಪ್ಪಿಸಿ, ಅದು ಸ್ಥಗಿತಗೊಳ್ಳುವಂತೆ ಮಾಡುವುದರಿಂದ ಥಾಮಸ್ ಈ ಮಸೂದೆಯನ್ನು ವಿರೋಧಿಸುವೆನೆಂದರು.

ನಂತರ ಇ. ಎಂ. ಎಸ್. ಮಾತನಾಡಿದರು. ತಾವು ವಸ್ತುವಾದಿಯಾದ್ದರಿಂದ ಎಲ್ಲ ಧರ್ಮಗಳನ್ನೂ ವಿರೋಧಿಸುವೆನೆಂದು ಹೇಳಿ, ಅದನ್ನು ನಂಬುವವರು ಅದರ ಬೋಧನೆ ಆಚರಣೆಗಳಿಗೆ ಹೊಂದಿರುವ ಹಕ್ಕನ್ನು ತಾವು ರಕ್ಷಿಸುವುವವರೆಂದು ಹೇಳಿದರು.

ಜಾತ್ಯತೀತತೆ ಎಂದರೆ ನಮ್ಮ ದೇಶದ ಕೆಲವರು ಹೇಳುವ ಹಾಗೆ "ಎಲ್ಲ ಧರ್ಮಗಳಿಗೂ ಸಮಾನ ಗೌರವ" ತೋರಿಸುವುದಲ್ಲ. ರಾಜ್ಯ ವ್ಯವಸ್ಥೆಯನ್ನು ಚರ್ಚಿನಿಂದ ಸಂಪೂರ್ಣವಾಗಿ ಬೇರ್ಪಡಿಸುವುದು ಮತ್ತು ಶಿಕ್ಷಣವನ್ನು ಧರ್ಮದಿಂದ ದೂರ ಇರಿಸುವುದು ಎಂದರ್ಥ. ಯಾವುದೇ ಪ್ರಜೆಯ ಧರ್ಮ ಶ್ರದ್ಧೆ ಆಚರಣೆಗಳಲ್ಲಿ ದೇಶ ಮಧ್ಯ ಪ್ರವೇಶಿಸಬಾರದೆನ್ನುವ ಹಾಗೆಯೇ, ಧರ್ಮವೂ ತನ್ನ ಕ್ಷೇತ್ರದಲ್ಲಿ ತಾನಿರಬೇಕೆ ಹೊರತು ಆಡಳಿತದಲ್ಲಿ ತಲೆಹಾಕಬಾರದು ಎಂದರು.

○

ಎಡರಂಗ ಸರ್ಕಾರದ ಸಾಧನೆಗಳು ಇಡೀ ಭಾರತಕ್ಕೆ ಮಾರ್ಗದರ್ಶಕವಾಗಿದೆ

ಮಧುರೈನಲ್ಲಿ ಜೂನ್ 27 ರಂದು ನಡೆದ 1 ಲಕ್ಷ ಜನರ ಬೃಹತ್ ಬಹಿರಂಗ ಸಭೆಯಲ್ಲಿ ಇಂದಿನ ರಾಜಕೀಯ ಪರಿಸ್ಥಿತಿ ಮತ್ತು ಎಡರಂಗ ಸರ್ಕಾರದ ಸಾಧನೆಗಳನ್ನು ವಿವರಿಸುತ್ತಾ ಮಾತನಾಡುತ್ತಿದ್ದ ಪ. ಬಂಗಾಳದ ಮುಖ್ಯಮಂತ್ರಿ ಕಾಂ. ಜ್ಯೋತಿಬಸುರವರು,

"ಕೇಂದ್ರದಲ್ಲಿ ಜನತಾಪಕ್ಷ, ರಾಜ್ಯಗಳಲ್ಲಿ ಕಾಂಗ್ರೆಸ್, ಎ. ಡಿ. ಎಂ. ಕೆ. ಮುಂತಾದ ಪಕ್ಷಗಳು ಅಧಿಕಾರದಲ್ಲಿವೆ. ಪ. ಬಂಗಾಳ ಮತ್ತು ತ್ರಿಪುರಾಗಳಲ್ಲಿ ಸಿ. ಪಿ. ಐ. (ಎಂ) ನೇತೃತ್ವದ ಎಡರಂಗ ಸರ್ಕಾರಗಳಿವೆ. ಇವು ಇತರ ಸರ್ಕಾರಗಳಿಂದ ತೀರಾ ಭಿನ್ನವಾಗಿದೆ. ಈ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ಎರಡು ವರ್ಷಗಳಲ್ಲಿ ಜನತೆಯ ಆಸೆ, ಆಕಾಂಕ್ಷೆಗಳನ್ನು ಈಡೇರಿಸುವುದರತ್ತ ತೀವ್ರ ಗಮನಹರಿಸಿ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ. ವಿರೋಧಿಗಳೂ ಸಹ ನಿರಾಕರಿಸಲಾಗದಂತಹ ಕೆಲವು ಅತ್ಯುತ್ತಮ ಪ್ರಗತಿಪರವಾದ ಸಾಧನೆಗಳನ್ನು ಮಾಡಿ ಇಡೀ ರಾಷ್ಟ್ರಕ್ಕೆ ಮಾರ್ಗದರ್ಶನ ನೀಡುತ್ತಿದೆ" ಎಂಬುದಾಗಿ ತಿಳಿಸಿದರು.

○

ತಮಿಳುನಾಡಿನಾದ್ಯಂತ ನೂರಾರು ಕಾರ್ಮಿಕರ ಬಂಧನ

ತಮಿಳುನಾಡಿನ ಹತ್ತಿಗಿರಣಿ ಕಾರ್ಮಿಕರು ಮೇ 25 ರಿಂದ ತಮ್ಮ ನ್ಯಾಯಬದ್ಧ ಬೇಡಿಕೆಗಳಿಗೋಸ್ಕರ ರಾಜ್ಯಾದ್ಯಂತ ಮುಷ್ಕರ ನಡೆಸುತ್ತಿದ್ದಾರೆ. ಮಾತುಕತೆಗಳಿಲ್ಲಾ ನಿಷ್ಫಲಗೊಂಡ ಕಾರಣ ಕಾರ್ಮಿಕರು ಅಂತಿಮವಾಗಿ ಪಿಕೆಟಿಂಗ್‌ನಲ್ಲಿ ಧುಮುಕಿದ್ದಾರೆ.

ಮಧುರೈನಲ್ಲಿ ಟ್ರೇಡ್ ಯೂನಿಯನ್ ಮುಖಂಡರ ನಾಯಕತ್ವದಲ್ಲಿ ಮೆರವಣಿಗೆ ಹೊರಟು ಕಲೆಕ್ಟರ್ ಕಛೇರಿಯ ಬಳಿ ಪಿಕೆಟಿಂಗ್ ನಡೆಸಿತು. ಇದರಲ್ಲಿ 120 ಮಂದಿ ಬಂಧಿತರಾದರು. ಇದೇ ರೀತಿಯಲ್ಲಿ ಮದ್ರಾಸು, ಕೊಯಮುತ್ತೂರು, ಸೇಲಂ ಮುಂತಾದ ಕಡೆಗಳಲ್ಲಿ ನಡೆಸಿದ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ನೂರಾರು ಮಂದಿ ಕಾರ್ಮಿಕರು ಬಂಧಿತರಾಗಿದ್ದಾರೆ.

○

ಹಳಿಯಾಳ ಗೋಲಿಬಾರ್ ವಿರುದ್ಧ ಪ್ರತಿಭಟನೆ

ನರಗುಂದ

ದಿನಾಂಕ 20-6-79 ರಂದು ಅಖಿಲ ಭಾರತ ಕಿಸಾನ್ ಸಭೆಯ ನರಗುಂದ ಶಾಖೆಯು ಹಳಿಯಾಳದ ರೈತರ ಮೇಲೆ ನಡೆದ ಪೋಲೀಸ್ ದೌರ್ಜನ್ಯ ಮತ್ತು ಗೋಲಿಬಾರನ್ನು ಖಂಡಿಸಿ ಹಾಗೂ ಕಾರ್ಮಿಕ ಮುಖಂಡ ಕಾಂ. ಆರ್.ಜಿ.ಸ್ಥಳೇಕರ್ ಮತ್ತಿತರ ರೈತ ನಾಯಕರನ್ನು ಕೂಡಲೇ ಬಿಡುಗಡೆ ಮಾಡಲು ಒತ್ತಾಯಿಸಿ ಬಹಿರಂಗ ಸಭೆಯನ್ನು ಏರ್ಪಡಿಸಿದ್ದಿತು. ಕರ್ನಾಟಕ ಪ್ರಾಂತ ರೈತಸಂಘದ ಕರೆಯ ಮೇರೆಗೆ ನಡೆದ ಬಹಿರಂಗ ಸಭೆಯಲ್ಲಿ ನರಗುಂದ ಕಿಸಾನ್‌ಸಭಾ ಶಾಖೆಯ ಸಂಚಾಲಕ ಕಾಂ.ಹನುಮಂತ ಹಳಕಟ್ಟಿ ಹಾಗೂ ತಾಲ್ಲೂಕು ರೈತ ಕೂಲಿಗಾರರ ಸಂಘ, ನಾಗರೀಕ ಕಲ್ಯಾಣ ಸಮಿತಿ ಮುಖಂಡರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಬೆಳಗಾಂ

ತಾ 20-6.79 ರಂದು ಬೆಳಗಾಂ ನಗರದಲ್ಲಿ ಹಿಂಡಾಲಿಯಂ ಕಾರ್ಖಾನೆಯ ಕಾರ್ಮಿಕರುಸೇರಿದಂತೆ ಸುಮಾರು 3000 ಜನರು, ತಾ.5-6-79 ರಂದು ಹಳಿಯಾಳದಲ್ಲಿ ರೈತರ ಮೇಲೆ ಪೋಲೀಸರು ಮಾಡಿದ ಗೋಲಿಬಾರನ್ನು ವಿರೋಧಿಸಿ ಮೆರವಣಿಗೆ ನಡೆಸಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ, ಹುತಾತ್ಮ ಮಾರುತಿ ಪವಾರ್‌ರವರ ಕುಟುಂಬಕ್ಕೆ ಸರಕಾರ ಕೂಡಲೇ ಪರಿಹಾರ ನೀಡಬೇಕೆಂದು ಒತ್ತಾಯಪಡಿಸಲಾಯಿತು.

○

ಕೇಂದ್ರ ಮಂತ್ರಿಗಳಿಗೆ ಮನವಿ

ದಿನಾಂಕ 27-6-79ರಲ್ಲಿ ಚಿಂತಾಮಣಿಯಲ್ಲಿ ಕಾಂ. ದೊರೈಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದ ಮಾರ್ಕ್ಸ್‌ವಾದಿ ಪಕ್ಷದ ಜಿಲ್ಲಾ ಸಭೆ ನಡೆದು, ಕೋಲಾರ ಜಿಲ್ಲಾ ಶಿಡ್ಲಘಟ್ಟ ಟೌನ್‌ನಲ್ಲಿರುವ ಮೈಸೂರು ಸಿಲ್ಕ್ ಫಿಲೇಚರ್ ನಿಯಮಿತಕ್ಕೆ ಸೇರಿದ ಕಾರ್ಮಿಕರ ತುರ್ತು ಸಮಸ್ಯೆಯಾದ ವಸತಿಸೌಕರ್ಯದ ಬಗ್ಗೆ ಚರ್ಚೆ ನಡೆಸಿ, ಒಂದು ಮನವಿಪತ್ರವನ್ನು ಕೇಂದ್ರ ಮಂತ್ರಿಗಳಿಗೆ ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು.

ಮನವಿ ಪತ್ರದ ಪ್ರತಿ :

ಕೋಲಾರ ಜಿಲ್ಲಾ, ಶಿಡ್ಲಘಟ್ಟ ಟೌನ್‌ನಲ್ಲಿರುವ ಮೈಸೂರು ಸಿಲ್ಕ್ ಫಿಲೇಚರ್ ನಿಯಮಿತಕ್ಕೆ ಸೇರಿರುವ ಸಿಲ್ಕ್ ಫಿಲೇಚರ್ ಕ್ವಾರ್ಟರ್ಸ್‌ನಲ್ಲಿ ಅನೇಕ ವರ್ಷಗಳಿಂದ ಬಾಡಿಗೆಗೆ ವಾಸವಿರುವ ಈ ಕೆಳಗೆ ಸಹಿ ಮಾಡಿರುವ ನಾವುಗಳು ಬರೆದುಕೊಳ್ಳುವ ಮನವಿ.

ಸ್ವಾಮಿ,

ನಾವುಗಳು ಯಾವ ವಿಧವಾದ ಆಸ್ತಿಗಳು ಇಲ್ಲದೆ ಕೇವಲ ದುಡಿಮೆಗಾರರಾಗಿದ್ದು ಬರುವ ಅತ್ಯಲ್ಪ ಕೂಲಿಯಿಂದ ಜೀವನ ನಡೆಸುತ್ತಾ ಮೇಲಿನ ಸಿಲ್ಕ್ ಫಿಲೇಚರ್ಸ್ ಕ್ವಾರ್ಟರ್ಸ್‌ನಲ್ಲಿ 12-15 ವರ್ಷಗಳಿಂದ ಬಾಡಿಗೆ ಕೊಟ್ಟು ವಾಸವಿದ್ದೇವೆ.

ಆದರೆ ಇತ್ತೀಚೆಗೆ ಸದರಿ ಕ್ವಾರ್ಟರ್ಸ್‌ನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡುತ್ತಿರುವುದಾಗಿ ತಿಳಿದುಬಂದಿದೆ. ಬೇರೆ ಯಾರಾದರೂ ಈ ಕ್ವಾರ್ಟರ್ಸ್‌ನ್ನು ಕ್ರಯಕ್ಕೆ ತೆಗೆದುಕೊಂಡಲ್ಲಿ ನಮಗೆ ತೊಂದರೆಯಾಗುವುದರಲ್ಲಿ ಸಂಶಯವಿಲ್ಲ. ಅನೇಕ ವರ್ಷಗಳಿಂದ ಬಾಡಿಗೆಗೆ ಇರುವ ನಮಗೆ ಕಿಮ್ಮತ್ತಿಗೆ ಕೊಡಲು ತಾವು ಕ್ರಮವಹಿಸಿ ಸಹಾಯಕರಾಗಬೇಕಾಗಿ ಕೋರುತ್ತೇವೆ.

ಆದಕಾರಣ ಮತ್ತೊಮ್ಮೆ ತಾವು ನಮ್ಮ ಮನವಿಯನ್ನು ಪರಿಶೀಲಿಸಿ ಅಲ್ಪ ಸಂಖ್ಯಾತರಾದ ನಮಗೆ ನಾವು ವಾಸವಿರುವ ಮನೆಗಳನ್ನು ಕಿಮ್ಮತ್ತಿಗೆ ಕೊಡಲು ತಾವು ಕ್ರಮವಹಿಸಿ ಸಹಾಯಕರಾಗಿ ನಿರ್ವಸತಿಗಾರರಾದ ನಮಗೆ ಸ್ವಂತ ಮನೆ ಆಗಲು ಅವಕಾಶಮಾಡಿ ಸಹಾಯಕರಾಗಬೇಕಾಗಿ ಪ್ರಾರ್ಥಿಸುತ್ತೇವೆ.

ಸ್ಥಳ: ಶಿಡ್ಲಘಟ್ಟ
ದಿನಾಂಕ: 26-6-79

ಇಂತಿ ತಮ್ಮ ವಿಶ್ವಾಸಿಗಳು,
(ಸಹಿ 46 ಜನದ್ದು)

ಇರಾನ್‌ನಲ್ಲಿ ಮಾರ್ಕ್ಸಿಸ್ಟರ ಭಾರೀ ಮೆರವಣಿಗೆ

ಇರಾನ್‌ನಲ್ಲಿರುವ ಮಾರ್ಕ್ಸಿಸ್ಟ್ ಸಂಘಟನೆಗಳನ್ನು ಅಲ್ಲಿನ ಧಾರ್ಮಿಕ ನಾಯಕರುಗಳು ಬಹಿರಂಗವಾಗಿ ದೂಷಿಸುತ್ತಿರುವ ಈ ಸಂದರ್ಭದಲ್ಲಿ ಜೂನ್ 28 ರಂದು ಆಶ್ಚರ್ಯಕರ ರೀತಿಯಲ್ಲಿ ನಡೆದ ಅತ್ಯಂತ ಬೃಹತ್ ಬಹಿರಂಗ ಸಭೆಯೊಂದು ಟೆಹರಾನ್ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಿತು.

ಇತ್ತೀಚೆಗೆ ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗವು ನಡೆಸಿದ ಮೆರವಣಿಗೆಗಿಂತಲೂ ಇದು ದೊಡ್ಡದಾಗಿತ್ತು.

"ಎಲ್ಲಾ ಅಮೇರಿಕನ್ನರೂ ದೇಶ ಬಿಟ್ಟು ತೊಲಗಿದಾಗಲೇ ನಮಗೆ ಅಂತಿಮ ವಿಜಯ" "ಷಾ ರವರ ವಿರುದ್ಧ ಹೋರಾಟ ನಡೆಸಿದ ಗೆರಿಲ್ಲಾಗಳ ಬೇಡಿಕೆಯನ್ನು ಈಡೇರಿಸದ ಸರ್ಕಾರಕ್ಕೆ ಧಿಕ್ಕಾರ" ಎಂಬ ಫಲಕಗಳನ್ನು ಪ್ರದರ್ಶನಕಾರರು ಹಿಡಿದಿದ್ದರು. ಈ ಮೆರವಣಿಗೆ ಇಲ್ಲಿನ ಎಡಪಂಥಿಯ ಶಕ್ತಿಗಳಿಗೆ ಮತ್ತಷ್ಟು ಸ್ಫೂರ್ತಿ ನೀಡಿದೆ.

ಆರ್ಥಿಕ ಸಮೀಕ್ಷೆ :

ಗ್ರಾಮೀಣ ಕಾರ್ಮಿಕರ ಸಾಲದ ಹೊರೆ ಹೆಚ್ಚುತ್ತಿದೆ

—ಆರ್. ಚಂದ್ರ

ಇತ್ತೀಚೆಗೆ ಗ್ರಾಮೀಣ ಕಾರ್ಮಿಕರ ಸ್ಥಿತಿಗತಿಗಳ ಕುರಿತು 1974-75ರ ಗ್ರಾಮೀಣ ವಿಚಾರಣಾ ವರದಿ ಮತ್ತು ಯೋಜನಾ ಆಯೋಗದ ಅಧ್ಯಯನದ ಅಂಶಗಳು ಪ್ರಕಟವಾಗಿದ್ದು (ಇಕನಾಮಿಕ್ಸ್ & ಪೊಲಿಟಿಕಲ್ ವೀಕ್ಲಿ, 26-5-79 ಮತ್ತು ಇಂಡಿಯನ್ ಎಕ್ಸ್‌ಪ್ರೆಸ್: 15, 16 & 19 ಜೂನ್, 1979) ಸಮಾಜ ಚಿಂತಕರ ಗಮನ ಸೆಳೆದಿದೆ.

ಭೂಸುಧಾರಣೆ : ತಿರುವುಮುರುವು:

ಸ್ವಾತಂತ್ರ್ಯಾನಂತರದ ದೀರ್ಘಕಾಲದ ಕಾಂಗ್ರೆಸ್ ಆಳ್ವಿಕೆಯಲ್ಲಿ ಮತ್ತು ಕಳೆದ 2 ವರುಷಗಳ ಜನತಾ ಆಳ್ವಿಕೆಯಲ್ಲಿ ಭೂಸುಧಾರಣೆಯು ಭೂಮಾಲಕರ ಸುಧಾರಣೆಯಾಗಿ ತಿರುವುಮುರುವಾಯಿತು. ಅಧಿಕೃತ ವಲಯಗಳಿಂದ ತಿಳಿದು ಬಂದಂತೆ, ಈಗ ದೇಶದ ಒಟ್ಟು ಗ್ರಾಮೀಣ ಕುಟುಂಬಗಳ ಶೇ. 13 ರಷ್ಟು ಕುಟುಂಬಗಳು ಹತ್ತು ಎಕರೆಗಳಿಗಿಂತಲೂ ಹೆಚ್ಚಿನ ಭೂಹಿಡುವಳಿದಾರರಾಗಿದ್ದು ಶೇ. 64 ರಷ್ಟು ಭೂಸ್ವಾಧೀನ ಹೊಂದಿದ್ದಾರೆ. ಶೇ. 5 ರಷ್ಟು ಕುಟುಂಬಗಳು ಇಪ್ಪತ್ತು ಎಕರೆಗಳಿಗಿಂತಲೂ ಹೆಚ್ಚು ಹಿಡುವಳಿ ಇರುವ ಕುಟುಂಬಗಳು ಶೇ. 41 ರಷ್ಟು ಭೂಸ್ವಾಮ್ಯ ಹೊಂದಿವೆ. ಇದಕ್ಕೆ ತದ್ವಿರುದ್ಧವಾಗಿ, ಶೇ. 22 ರಷ್ಟು ಕುಟುಂಬಗಳಿಗೆ ಚಿಂದು ಹಿಡಿ ಭೂಮಿಯೂ ಇಲ್ಲ; ಶೇ. 25 ರಷ್ಟು ಕುಟುಂಬಗಳಿಗೆ ಒಂದು ಎಕರೆಗಿಂತಲೂ ಕಡಿಮೆ ಭೂಮಿ ಇರುವುದು; ಇನ್ನೂ ಶೇ. 14 ರಷ್ಟು ಕುಟುಂಬಗಳು 1 ರಿಂದ 2.5 ಎಕರೆಗಳೊಳಗಿನ ಲಾಭದಾಯಕವಲ್ಲದ ಭೂಮಿಯನ್ನು ಹೊಂದಿರುವರು. ಅಂದರೆ, ಒಟ್ಟು ಶೇ. 61 ರಷ್ಟು ಗ್ರಾಮೀಣ ಕುಟುಂಬಗಳು ಒಂದೋ ಭೂರಹಿತರು ಬಡವರು ಅಥವಾ ಲಾಭದಾಯಕವಲ್ಲದ ಸಣ್ಣ ಹಿಡುವಳಿಯ ಬಡವರು. ಅವರೆಲ್ಲರೊಡನಿರುವ ಭೂಮಿಯು ಕೇವಲ ಶೇ. 8 ರಷ್ಟು! ಇವರೇ ಪ್ರತೀ ವರ್ಷವೂ ಗ್ರಾಮೀಣ ಕಾರ್ಮಿಕ ಸೈನ್ಯಕ್ಕೆ ಹೆಚ್ಚು ಹೆಚ್ಚಾಗಿ ಸೇರ್ಪಡೆಯಾಗುತ್ತಿರುವುದು. ಇವರಲ್ಲಿಯೇ, ಲಕ್ಷಾಂತರ ಜನರು ನಿರುದ್ಯೋಗಿಗಳ, ಅರೆ ಉದ್ಯೋಗಿಗಳ, ಬಡವರ, ದರಿದ್ರರ, ಕಡುದರಿದ್ರರ ಸಾಲಿಗೆ ಸೇರುತ್ತಿರುವುದು.

ಹೆಚ್ಚುತ್ತಿರುವ ಗ್ರಾಮೀಣ ಕಾರ್ಮಿಕರು :

1971ನೇ ಕೃಷಿಗಣನೆಯಂತೆ, 1950ರ ದಶಕದಲ್ಲಿ ಭೂರಹಿತ ಗ್ರಾಮೀಣ ಕಾರ್ಮಿಕರ ಸಂಖ್ಯೆಯು ಒಟ್ಟು ಗ್ರಾಮೀಣ ಜನಸಂಖ್ಯೆಯ ಶೇ. 18 ರಷ್ಟಾಗಿದ್ದು, 1960ರ ದಶಕದಲ್ಲಿ ಶೇ. 30ಕ್ಕೇರಿತು. ಅದೇ ಅವಧಿಯಲ್ಲಿ ಸ್ವಂತ ವ್ಯವಸಾಯ ಮಾಡುವವರ ಸಂಖ್ಯೆಯು ಒಟ್ಟು ಗ್ರಾಮೀಣ ಜನಸಂಖ್ಯೆಯ ಶೇ. 60ರಿಂದ ಶೇ. 50ಕ್ಕಿಳಿಯಿತು. 1974-75ರ ಗ್ರಾಮೀಣ ವಿಚಾರಣಾ ವರದಿ ಮತ್ತು ಇತ್ತೀಚಿನ ಯೋಜನಾ ಆಯೋಗದ ಅಧ್ಯಯನದಂತೆ, ಗ್ರಾಮೀಣ ಕಾರ್ಮಿಕರ ಸಂಖ್ಯೆ 1964-65 ರಿಂದ 1977-78ರವರೆಗೆ 1740 ಲಕ್ಷಗಳಿಂದ 2230 ಲಕ್ಷಗಳಿಗೇರಿದೆ. ಅಂದರೆ, 14 ವರುಷಗಳಲ್ಲಿ ಇವರ ಸಂಖ್ಯೆ ವರ್ಷಕ್ಕೆ 35 ಲಕ್ಷಗಳಂತೆ ಏರುತ್ತಾ 490 ಲಕ್ಷಗಳಷ್ಟು ಹೆಚ್ಚಾಗಿದೆ! ಇದೇ ಅವಧಿಯಲ್ಲಿ ಗ್ರಾಮೀಣ ಕೃಷಿಕಾರ್ಮಿಕರ ಸಂಖ್ಯೆಯು ವರ್ಷಕ್ಕೆ 15 ಲಕ್ಷಗಳಂತೆ ಹೆಚ್ಚುತ್ತಾ 1977-78ರಲ್ಲಿ ಅವರ ಸಂಖ್ಯೆಯು 320 ಲಕ್ಷಗಳಿಂದ 530 ಲಕ್ಷಗಳಿಗೇರಿದೆ. 1961ರಿಂದ 1971ರ ಅವಧಿಯಲ್ಲಿ ಇವರ ಸಂಖ್ಯೆಯು 299 ಲಕ್ಷಗಳಿಂದ 422 ಲಕ್ಷಗಳಿಗೇರಿತ್ತು. ಕಳೆದ ದಶಕದಲ್ಲಿ ಕೃಷಿಕಾರ್ಮಿಕರ ಸಂಖ್ಯೆಯು 123 ಲಕ್ಷಗಳಷ್ಟು ಹೆಚ್ಚಿದರೆ, ಈ ದಶಕದ ಮೊದಲ ಅರ್ಧದಲ್ಲಿಯೇ ಅವರ ಸಂಖ್ಯೆ 112 ಲಕ್ಷಗಳಷ್ಟು ಹೆಚ್ಚಿದೆ!

1964-65 ರಿಂದ 1974-75ರ ಅವಧಿಯಲ್ಲಿ, ದೇಶದಲ್ಲಿ ಒಟ್ಟು ಗ್ರಾಮೀಣ ಕುಟುಂಬಗಳ ಸಂಖ್ಯೆಯು 70.4 ಮಿಲಿಯಗಳಿಂದ 82.1 ಮಿಲಿಯಗಳಿಗೇರಿದೆ. ಒಟ್ಟು 11.7ಮಿಲಿಯಗಳಷ್ಟು ಹೆಚ್ಚಾದ ಗ್ರಾಮೀಣ ಕುಟುಂಬಗಳ ಸಂಖ್ಯೆಯಲ್ಲಿ 7 ಮಿಲಿಯಗಳಷ್ಟು ಗ್ರಾಮೀಣ ಕಾರ್ಮಿಕರು. ಅವರಲ್ಲಿಯೂ 5.4 ಮಿಲಿಯಗಳಷ್ಟು ಕೃಷಿಕಾರ್ಮಿಕರು. ಅಂದರೆ, ಈ ಅವಧಿಯಲ್ಲಿ ಹೆಚ್ಚಿದ ಕೃಷಿಕಾರ್ಮಿಕರ ಕುಟುಂಬಗಳ ಸಂಖ್ಯೆಯು ಗ್ರಾಮೀಣ ಕುಟುಂಬಗಳು ಹೆಚ್ಚಿದ ಸಂಖ್ಯೆಯ ಶೇ. 46ರಷ್ಟು ಮತ್ತು ಗ್ರಾಮೀಣ ಕಾರ್ಮಿಕರ ಕುಟುಂಬಗಳು ಹೆಚ್ಚಿದ ಸಂಖ್ಯೆಯ ಶೇ. 77 ರಷ್ಟು ಆಗಿರುವುದು! ಇದೇ ಅವಧಿಯಲ್ಲಿ ಗ್ರಾಮೀಣ ಕುಟುಂಬಗಳ ಸರಾಸರಿ ಭೂಹಿಡುವಳಿಯು 2.5 ಎಕರೆಗಳಿಂದ 2.2 ಎಕರೆಗಳಿಗಿಳಿದಿದೆ. ಮತ್ತು ಅಲ್ಪಸ್ವಲ್ಪ ಭೂಹಿಡುವಳಿ ಇರುವ ಬಡ ಗ್ರಾಮೀಣ ಕಾರ್ಮಿಕರ ಸಂಖ್ಯೆಯು ಶೇ. 43.9 ರಿಂದ ಶೇ. 49.2ಕ್ಕೇರಿದೆ. ಇದರ ಅರ್ಥವೇನು? ಚಿಕ್ಕಪುಟ್ಟ ಭೂಹಿಡುವಳಿಗಾರರು ಗ್ರಾಮೀಣ ಕಾರ್ಮಿಕರ ಪಡೆಗೆ ಪ್ರತಿವರ್ಷವೂ ಭರದಿಂದ ಸೇರ್ಪಡೆಗೊಳ್ಳುತ್ತಿದ್ದಾರೆ. ಕಾರಣ? ಇವರ ಹಿಂದಿನ ಮತ್ತು ಇಂದಿನ ಸಾಲದ ಹೊರೆ ಹೆಚ್ಚುತ್ತಿದೆ. ಸಣ್ಣ ಹಿಡುವಳಿಗಾರರಿಗೆ ವ್ಯವಸಾಯಕ್ಕೆ ಅಗತ್ಯವಾದ ಸಾಲ, ಸಹಾಯ, ಸಲಹೆಗಳು ಸಮಯಕ್ಕೆ ಸರಿಯಾಗಿ ಸಾಕಷ್ಟು ಸಿಗುತ್ತಿಲ್ಲ. ಅವರ ಬೆಳೆಗೆ ಯೋಗ್ಯ ಬೆಲೆಯೂ ಸಕಾಲಕ್ಕೆ ಸಿಗುತ್ತಿಲ್ಲ. ಒಕ್ಕಲೆಬ್ಬಿಸುವುದರಿಂದ ಮತ್ತು ಭೂಮಿತಿ ಕಾಯಿದೆಗಳನ್ನು ಉಲ್ಲಂಘಿಸುತ್ತಿರುವುದರಿಂದ, ವ್ಯವಸಾಯದಲ್ಲಿ ಭರವಸೆ ಕಳೆದುಕೊಂಡು ಚಿಕ್ಕಪುಟ್ಟ ವ್ಯವಸಾಯಗಾರರು ಅನಿವಾರ್ಯವಾಗಿ ಗ್ರಾಮೀಣ ಕಾರ್ಮಿಕರ ಸೈನ್ಯಕ್ಕೆ ಸೇರ್ಪಡೆಯಾಗುತ್ತಿದ್ದಾರೆ. ಆಂಧ್ರಪ್ರದೇಶ, ಬಿಹಾರ, ಕರ್ನಾಟಕ, ಕೇರಳ, ಮಹಾರಾಷ್ಟ್ರ, ಉ. ಪ್ರದೇಶ ಮತ್ತು ಪ. ಬಂಗಾಳ ರಾಜ್ಯಗಳಲ್ಲಿ ಭೂಹೀನ ಕೃಷಿಕಾರ್ಮಿಕರ ಸಂಖ್ಯೆಯು ವಿಶೇಷವಾಗಿ ಹೆಚ್ಚುತ್ತಿದೆ.

ಹೆಚ್ಚುತ್ತಿರುವ ಗ್ರಾಮೀಣ ಕಾರ್ಮಿಕರಲ್ಲಿ ನಿರುದ್ಯೋಗ ಹಾಗೂ ಅರೆ ಉದ್ಯೋಗದ ಸಮಸ್ಯೆಗಳು ತಾಂಡವವಾಡುತ್ತಿವೆ. ಕೃಷಿಕಾರ್ಮಿಕರಿಗೆ 1964-65 ರಲ್ಲಿ ವರ್ಷಕ್ಕೆ ಸರಾಸರಿ 277 ದಿನಗಳಷ್ಟು ಕೆಲಸ ದೊರಕುತ್ತಿದ್ದರೆ, ಹತ್ತು ವರುಷಗಳ ನಂತರ ವರ್ಷಕ್ಕೆ ಸರಾಸರಿ ಕೇವಲ 250 ದಿನಗಳಷ್ಟು ಕೆಲಸ ದೊರಕುತ್ತಿದೆ. ಕೂಲಿಯ ದರಗಳೂ ಅತ್ಯಲ್ಪವಾಗಿದ್ದು, ಹಲವು ರಾಜ್ಯಗಳಲ್ಲಿ ಕನಿಷ್ಟ ಕೂಲಿ ಕಾಯಿದೆಗಳು ಬರೆದ ಕಾಗದದಲ್ಲಿಯೇ ಇವೆ. ಇದರಿಂದ ಗ್ರಾಮೀಣ ಕಾರ್ಮಿಕರ ಸಾಲದ ಹೊರೆ ವಿಪರೀತವಾಗಿ ಹೆಚ್ಚುತ್ತಿದೆ.

ಹೆಚ್ಚುತ್ತಿರುವ ಸಾಲದ ಹೊರೆ :

ರಿಸರ್ವ್‌ಬ್ಯಾಂಕ್ ಅಧ್ಯಯನದಂತೆ, ದೇಶದ ಒಟ್ಟು ಗ್ರಾಮೀಣ ಸಾಲದ ಹೊರೆ 1956 ರಲ್ಲಿ ರೂ. 900 ಕೋಟಿಗಳಷ್ಟಾಗಿದ್ದು 1971 ರಲ್ಲಿ ರೂ. 3000 ಕೋಟಿಗಳಿಗೇರಿತ್ತು. ಅನಂತರದ 7-8 ವರುಷಗಳಲ್ಲಿ ಈ ಸಾಲದ ಹೊರೆ ನಿಃಸಂಶಯವಾಗಿ ಇನ್ನಷ್ಟೂ ಹೆಚ್ಚಿರುವುದು. 1974-75ರ ಗ್ರಾಮೀಣ ವಿಚಾರಣಾ ವರದಿಯಂತೆ, ಕಳೆದ 10 ವರುಷಗಳಲ್ಲಿ ಗ್ರಾಮೀಣ ಕಾರ್ಮಿಕರಲ್ಲಿ ಸಾಲಕ್ಕೊಳಗಾದವರ ಸಂಖ್ಯೆಯು ಶೇ. 60.6 ರಿಂದ ಶೇ. 66.4ಕ್ಕೇರಿದೆ. ಬಿಹಾರ, ರಾಜಸ್ಥಾನ, ಪಂಜಾಬ್, ಹರಿಯಾಣ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಶೇ. 70ಕ್ಕಿಂತಲೂ ಹೆಚ್ಚು ಗ್ರಾಮೀಣ ಕಾರ್ಮಿಕರು ಸಾಲಕ್ಕೊಳಗಾಗಿದ್ದಾರೆ. ದೇಶದಲ್ಲಿಯೇ ಅತ್ಯಂತ ಮುಂದುವರಿದ ಕೃಷಿ ರಾಜ್ಯಗಳಾದ, ಹಸಿರುಕ್ರಾಂತಿಗೆ ಹೆಸರುವಾಸಿಯಾದ ಹರಿಯಾಣ ಮತ್ತು ಪಂಜಾಬ್ ರಾಜ್ಯಗಳಲ್ಲಿಯೇ 1974-75 ರಷ್ಟರಲ್ಲಿ ಶೇ. 80 ಮತ್ತು ಶೇ. 75 ರಷ್ಟು ಗ್ರಾಮೀಣ ಕಾರ್ಮಿಕರು ಸಾಲದಲ್ಲಿ ಮುಳುಗಿರುವುದು ಅತ್ಯಂತ ಗಮನಾರ್ಹವಾಗಿದೆ. ಈ ಎರಡು ಮುಂದುವರಿದ ರಾಜ್ಯಗಳಲ್ಲಿಯೂ ಇತರ ರಾಜ್ಯಗಳಿಗಿಂತ ಗ್ರಾಮೀಣ ಕಾರ್ಮಿಕರು ಪರಂಪರಾಗತವಾಗಿ ದುಬಾರಿ ಬಡ್ಡಿಗೆ ಸಾಲಪಡೆದುಕೊಳ್ಳುವುದು ಕಡಿಮೆಯಾಗಲೂ ಇಲ್ಲ ಮತ್ತು ಅವರಿಗೆ ಸಹಕಾರಿ ಅಥವಾ ವಾಣಿಜ್ಯ ಬ್ಯಾಂಕುಗಳು ನೀಡಿದ ಸಾಲ ಹೆಚ್ಚಾಗಲೂ ಇಲ್ಲ! ಅಂದರೆ, ಪ್ರತಿ ವರುಷವೂ ವ್ಯವಸಾಯಕ್ಕಾಗಿ-ನಿರಾವರಿ, ಗೊಬ್ಬರ, ವಿದ್ಯುತ್, ಸಾರಿಗೆ, ಯಂತ್ರೋಪಕರಣ, ಇತ್ಯಾದಿಗಳಿಗಾಗಿ ಸರಕಾರ, ಬ್ಯಾಂಕು, ಮತ್ತಿತರ ಸಂಘಸಂಸ್ಥೆಗಳು ನೀಡುವ ಕೋಟಿಗಟ್ಟಲೆ ರೂಪಾಯಿಗಳ ಸಾಲ ಸವಲತ್ತುಗಳ ಸಿಂಹಪಾಲು ಶ್ರೀಮಂತ ರೈತರ ಮತ್ತು ಭೂಮಾಲಕರ ಬೊಕ್ಕಸಕ್ಕೇ ಸೇರುತ್ತಿವೆ. ಮಾರುಕಟ್ಟೆಗಾಗಿ ಬೆಳೆಸುವ ಈ ಶ್ರೀಮಂತ ವರ್ಗಕ್ಕೇ ದೇಶವಿದೇಶಗಳ ವ್ಯಾಪಾರದಲ್ಲಿ ಬೆಲೆಏರಿಕೆಯಿಂದಾಗಿ ಭಾರೀ ಪ್ರಮಾಣದಲ್ಲಿ ಲಾಭಗಿಟ್ಟುತ್ತಿದೆ. ಹೀಗಾಗಿ, ಗ್ರಾಮೀಣ ಶ್ರೀಮಂತರ ಸಾಲ ಕೊಡುವ ಶಕ್ತಿ ಹೆಚ್ಚುತ್ತಿದೆ ಮತ್ತು ಗ್ರಾಮೀಣ ಬಡವರ, ಭೂಹೀನ ಕೃಷಿಕಾರ್ಮಿಕರ ಸಾಲದ ಅಗತ್ಯಗಳೂ ಹೆಚ್ಚುತ್ತಿವೆ. ಅವರು ಸಾಲದ ಹೊರೆಯಿಂದ ದಿವಾಳಿಯಾಗುತ್ತಿದ್ದಾರೆ, ನಿರ್ಗತಿಕರಾಗುತ್ತಿದ್ದಾರೆ.

ಗ್ರಾಮೀಣ ಕಾರ್ಮಿಕರಲ್ಲಿಯೂ, ಸ್ವಲ್ಪ ಭೂಹಿಡುವಳಿ ಇರುವ ಗ್ರಾಮೀಣ ಕಾರ್ಮಿಕರ ಸಾಲದ ಹೊರೆ ಇನ್ನಷ್ಟೂ ಹೆಚ್ಚಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಈ ಎರಡು ವಿಧಗಳ ಗ್ರಾಮೀಣ ಕಾರ್ಮಿಕರಲ್ಲಿ ಶೇ. 62 ಮತ್ತು ಶೇ. 71 ರಷ್ಟು ಕುಟುಂಬಗಳು ಸಾಲದಲ್ಲಿ ಮುಳುಗಿವೆ. ಬಡ್ಡಿಗೆ ಸಾಲ ಕೊಡುವ ಗ್ರಾಮೀಣ ಧನಿಕರು, ಸ್ವಲ್ಪವಾದರೂ ಭೂಹಿಡುವಳಿ ಇರುವವರಿಗೇ ಸಾಲಕೊಡುವರೇ ಹೊರತು ಭೂಹೀನ ಕೃಷಿಕಾರ್ಮಿಕರಿಗೆ ಸಾಲ ನೀಡಲು ಹೆಚ್ಚಾಗಿ ಮುಂದಾಗುವುದಿಲ್ಲ. 1964-65 ರಿಂದ 10 ವರುಷಗಳಲ್ಲಿ ಪರಿಶಿಷ್ಟ ಜಾತಿಯ ಗ್ರಾಮೀಣ ಕಾರ್ಮಿಕರ ಕುಟುಂಬಗಳಲ್ಲಿ ಸಾಲಕ್ಕೊಳಗಾದವರ ಸಂಖ್ಯೆಯು ಶೇ. 66 ರಿಂದ ಶೇ. 71ಕ್ಕೇರಿದೆ. ಇದೇ ಅವಧಿಯಲ್ಲಿ, ಪರಿಶಿಷ್ಟ ಪಂಗಡದ ಗ್ರಾಮೀಣ ಕಾರ್ಮಿಕರ ಕುಟುಂಬಗಳಲ್ಲಿ ಸಾಲಕ್ಕೊಳಗಾದವರ ಸಂಖ್ಯೆಯು ಶೇ. 47ರಿಂದ ಶೇ. 50ಕ್ಕೇರಿದೆ. ಗ್ರಾಮೀಣ ಕಾರ್ಮಿಕ ಕುಟುಂಬಗಳ ಸರಾಸರಿ ಸಾಲದ ಹೊರೆಯ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ಸರಾಸರಿ ಕೃಷಿಕ್ಷೇತ್ರದಲ್ಲಿ ಸಾಕಷ್ಟು ಮುಂದುವರಿದ ರಾಜ್ಯಗಳಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕುಟುಂಬದ ಗ್ರಾಮೀಣ ಕಾರ್ಮಿಕರ ಸಾಲದ ಹೊರೆಯು ಇತರ ರಾಜ್ಯಗಳಿಗಿಂತ ಹೆಚ್ಚಾಗಿಯೇ ಇರುವುದನ್ನೂ ಮೇಲಿನ ಅಧ್ಯಯನಗಳು ವರದಿ ಮಾಡಿವೆ. ಸಾಲದ ಹೊರೆಯನ್ನು ವಾರ್ಷಿಕ ಆದಾಯಕ್ಕೆ ಹೋಲಿಸಿದರೆ, ಗ್ರಾಮೀಣ ಕಾರ್ಮಿಕರ ದುಃಸ್ಥಿತಿಯು ಇನ್ನಷ್ಟೂ ಸ್ಪಷ್ಟವಾಗುವುದು. 1964-65 ರಿಂದ ಹತ್ತು ವರುಷಗಳಲ್ಲಿ ಪಿತ್ರಾರ್ಜಿತ ಸಾಲದ ಹೊರೆಯು ದ್ವಿಗುಣವಾಗಿದೆ. (ರೂ. 15 ರಿಂದ ರೂ. 30ಕ್ಕೇರಿದೆ) ಒಟ್ಟು ಸರಾಸರಿ ಸಾಲದ ಹೊರೆಯ ಶೇ. 5-6 ರಷ್ಟು ಪಿತ್ರಾರ್ಜಿತ ಸಾಲವಾಗಿದೆ. ಈ ಅವಧಿಯಲ್ಲಿ, ಒಟ್ಟು ಸಾಲದಲ್ಲಿ ವಸ್ತುಗಳ ರೂಪದಲ್ಲಿಯೇ ಪಡೆದ ಸಾಲವು ಶೇ. 12.8 ರಿಂದ ಶೇ. 14ಕ್ಕೆ ಏರಿರುವುದರಿಂದ, ಗ್ರಾಮೀಣ ಪ್ರದೇಶಗಳಲ್ಲಿ ಬಡವರಿಗೆ ಸಾಲ ನೀಡಲು ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ವಿಫಲಗೊಂಡಿರುವುದು ಸ್ಪಷ್ಟವಾಗಿದೆ.

ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳ ವೈಫಲ್ಯ :

1964-65ರಲ್ಲಿ ಗ್ರಾಮೀಣ ಕಾರ್ಮಿಕರ ಕುಟುಂಬಗಳ ಒಟ್ಟು ಸಾಲದ ಹೊರೆಯ ಶೇ. 30.6 ರಷ್ಟು ಗ್ರಾಮೀಣ ಹಣಗಾರರಿಂದ ದುಬಾರಿ ಬಡ್ಡಿಗೆ ಪಡೆದುದಾದರೆ, 1974-75 ರಲ್ಲಿ ಶೇ. 48 ರಷ್ಟು ಹಣಗಾರರಿಂದಲೇ ಪಡೆದುದಾಗಿದೆ. ಗ್ರಾಮೀಣ ಬಡಜನರು ವರ್ಷಹೋದಂತೆ, ಹೆಚ್ಚು ಹೆಚ್ಚಾಗಿ ಹಣಗಾರರ ಸುಲಿಗೆಗೇ ಒಳಗಾಗುತ್ತಿದ್ದಾರೆ. 1974-75ರಲ್ಲಿಯೂ ಗ್ರಾಮೀಣ ಕಾರ್ಮಿಕರ ಕುಟುಂಬಗಳ ಒಟ್ಟು ಸಾಲದ ಹೊರೆಯಲ್ಲಿ ಸಹಕಾರಿ ಸಂಘಗಳಿಂದ ಪಡೆದುದ್ದು ಶೇ. 5.3 (ಪರಿಶಿಷ್ಟ ಜಾತಿಯವರದ್ದು ಶೇ. 3.8) ಮತ್ತು ವಾಣಿಜ್ಯ ಬ್ಯಾಂಕುಗಳಿಂದ ಪಡೆದದ್ದು ಕೇವಲ ಶೇ. 3.5 (ಪರಿಶಿಷ್ಟ ಪಂಗಡದವರದ್ದು ಶೇ.

ರಾಜ್ಯಗಳು	1964-65	1974-75	ಸರಾಸರಿ ವಾರ್ಷಿಕಆದಾಯ (1974-75ರ ದರಗಳಲ್ಲಿ)
ರಾಜಸ್ಥಾನ	ರೂ. 585	ರೂ. 1434	ರೂ. 819
ಪಂಜಾಬ್	ರೂ. 629	ರೂ. 1201	ರೂ. 1482
ಹರಿಯಾಣ		ರೂ. 1648	ರೂ. 1168
ಗುಜರಾತ್	ರೂ. 294	ರೂ. 799	ರೂ. 1034
ಕರ್ನಾಟಕ	ರೂ. 312	ರೂ. 750	ರೂ. 784
ಅಖಿಲಭಾರತ	ರೂ. 244	ರೂ. 584	ರೂ. 989

[7ನೇ ಪುಟ ನೋಡಿ]

ತೆಲಂಗಾಣಾ ರೈತರ ಚಾರಿತ್ರಿಕ ಸಶಸ್ತ್ರ ಹೋರಾಟ

—ವಿರಾಜ

ಸುಮಾರು 33 ವರ್ಷಗಳ ಹಿಂದೆ ಇದೇ ವಾರದಲ್ಲಿ (ಜುಲೈ 1ನೇಯ ವಾರ) ಭಾರತದ ಕ್ರಾಂತಿಕಾರಿ ಚಳುವಳಿಯ ಒಂದು ರೋಮಾಂಚಕಾರಿ ಅಧ್ಯಾಯ ಆರಂಭವಾಗಿತ್ತು. ಅದು ಜುಲೈ 4, 1946 ರಂದು ದೊಡ್ಡಿ ಕೊಮುರಯ್ಯ ಅವರು ಹುತಾತ್ಮರಾಗುವುದರೊಂದಿಗೆ ಸಿಡಿದು 5 ವರ್ಷಗಳ ಕಾಲ ಅವಿರತವಾಗಿ ನಡೆದ ತೆಲಂಗಾಣಾ ರೈತರ ಸಶಸ್ತ್ರ ಹೋರಾಟ.

ಹಿನ್ನೆಲೆ

ಈಗಿನ ಆಂಧ್ರಪ್ರದೇಶ ರಾಜ್ಯದ 8 ಜಿಲ್ಲೆಗಳಿಂದ ಕೂಡಿದ ಪ್ರದೇಶಕ್ಕೆ ತೆಲಂಗಾಣಾ ಎಂದು ಹೆಸರು. ಇದು ರಾಜ್ಯಗಳ ಪುನರ್ವಿಂಗಡಣೆಯಾಗುವ ಮೊದಲು ಹೈದರಾಬಾದು ನಿಜಾಮನ ಆಡಳಿತದಲ್ಲಿದ್ದ ಪ್ರದೇಶ. ನಿಜಾಮನ ಆಳ್ವಿಕೆಗೆ ತೆಲುಗು ಮಾತನಾಡುವ ಜನರಿರುವ ತೆಲಂಗಾಣಾವಲ್ಲದೆ, ಮರಾಠಿ ಮಾತನಾಡುವ ಜನರಿರುವ ಮರಾಠವಾಡ ಮತ್ತು ಕನ್ನಡ ಮಾತನಾಡುವ ಜನರಿರುವ ಕೆಲವು ಜಿಲ್ಲೆಗಳು ಸೇರಿದ್ದವು. ಉರ್ದು ಮಾತನಾಡುವವರು ಅಲ್ಪ ಸಂಖ್ಯಾತರಾಗಿದ್ದರೂ ರಾಜ್ಯದ ಆಡಳಿತ ಭಾಷೆ ಉರ್ದುವಾಗಿತ್ತು. ರಾಜ್ಯದ ಬಹುಸಂಖ್ಯಾತ ಜನರ ಭಾಷೆ, ಸಂಸ್ಕೃತಿಗಳ ಸ್ವಾಭಾವಿಕ ಬೆಳವಣಿಗೆಯನ್ನು ಪೂರ್ಣವಾಗಿ ಹತ್ತಿಕ್ಕಲಾಗಿತ್ತು. ಜನರ ಭಾಷೆಗಳಲ್ಲಿ ಕಲಿಸುವ ಶಾಲೆಗಳನ್ನು ತೆರೆಯಲು ವಿಪರೀತ ಅಡೆತಡೆಗಳಿದ್ದವು.

ಈ ಇಡೀ ರಾಜ್ಯ ಪಾಳೆಯಗಾರಿ ವ್ಯವಸ್ಥೆ ಅದರ ಎಲ್ಲಾ ಕ್ರೌರ್ಯಗಳೊಂದಿಗೆ ಭದ್ರವಾಗಿ ಬೇರೂರಿದ್ದ ಪ್ರದೇಶವಾಗಿತ್ತು. ಹೈದರಾಬಾದು ರಾಜ್ಯದ ಒಟ್ಟು ಜಮೀನಿನ 60 % ಭಾಗ ಸರ್ಕಾರಿ ಭೂಕಂದಾಯಕ್ಕೆ (ದಿವಾನಿ ಭೂಮಿ) ಒಳಗಾಗಿದ್ದರೆ, 30 % ಭಾಗ ಜಾಗಿರ್‌ದಾರಿ ಪದ್ಧತಿಯಲ್ಲಿ ಮತ್ತು 10 % ನಿಜಾಮನ ಸ್ವಂತ ಜಮೀನು (ಸರ್ಫ್‌ಖಾಸ್) ಆಗಿತ್ತು. ನಿಜಾಮ ಮತ್ತು ಅವನ ದೊಡ್ಡ ಕುಟುಂಬ ವರ್ಗಕ್ಕೆ ಸುಮಾರು 2 ಕೋಟಿ ರೂ. ವೆಚ್ಚ ಮಾಡುತ್ತಿತ್ತು. ಮೇಲೆ ಹೇಳಿದ ಮೂರು ಥರದ ಜಮೀನುಗಳಲ್ಲಿ ರೈತರಿಂದ ಅತಿದೊಡ್ಡ ಪ್ರಮಾಣದಲ್ಲಿ ಬೇರೆ ಬೇರೆ ರೀತಿಯಲ್ಲಿ ಕಾನೂನುಬದ್ಧವಾಗಿಯೂ, ಕಾನೂನು ಬಾಹಿರವಾಗಿಯೂ, ತೆರಿಗೆ ಮತ್ತು ಭೂಕಂದಾಯಗಳನ್ನು ಬಲಾತ್ಕಾರವಾಗಿ ವಸೂಲು ಮಾಡಲಾಗುತ್ತಿತ್ತು. ರೈತನ ಶ್ರಮದ ದುಡಿಮೆಯ ದೊಡ್ಡ ಭಾಗವನ್ನು ನಿಜಾಮ ಮತ್ತು ಜಮೀನುದಾರರು ಕೊಳ್ಳೆಹೊಡೆಯುತ್ತಿದ್ದರು. ಭೂಒಡೆತನದ ವಿಪರೀತ ಕೇಂದ್ರೀಕರಣವನ್ನು ಒಂದೇ ಒಂದು ಉದಾಹರಣೆ ಕಣ್ಣಿಗೆ ಕಟ್ಟಿದ ಹಾಗೆ ಹೇಳುತ್ತದೆ–ಜನ್ನಾರೆಡ್ಡಿ ಪ್ರತಾಪರೆಡ್ಡಿ ಎಂಬುವನು ಸುಮಾರು ಒಂದುವರೆ ಲಕ್ಷ ಎಕರೆ ಜಮೀನು ಹೊಂದಿದ್ದ, ಹಲವರು 30-40 ಸಾವಿರ ಎಕರೆಗಳಷ್ಟು ಜಮೀನು ಹೊಂದಿದ್ದರು. ಇಷ್ಟೇ ಅಲ್ಲದೆ ವೆಟ್ಟಿ (ಬಲಾತ್ಕಾರದ ಬಿಟ್ಟಿ ದುಡಿಮೆ) ಪದ್ಧತಿ ಜಾರಿಯಲ್ಲಿತ್ತು. ಈ ಪದ್ಧತಿ ರೈತರನ್ನು ಮಾತ್ರವಲ್ಲದೆ ಇತರ ಕುಶಲ ಕುಲಕಸುಬಿಗರನ್ನೂ ತಟ್ಟುತ್ತಿತ್ತು. ಇವರು ಜಮೀನುದಾರರಿಗೆ ಪುಕ್ಕಟೆ ಸೇವೆ ಸಲ್ಲಿಸಬೇಕಾಗಿತ್ತು. ಹರಿಜನ ಕುಟುಂಬಗಳಂತೂ ಈ ಪದ್ಧತಿಯಿಂದಾಗಿ ಗುಲಾಮಗಿರಿಯ ಜೀವನ ನಡೆಸುತ್ತಿದ್ದವು.

ನಿಜಾಮನ ಆಡಳಿತ ಭ್ರಷ್ಟ ಲಂಚಕೋರ ಅಧಿಕಾರಿಗಳಿಂದ ಕೂಡಿದ ಏಕಾಧಿಕಾರವಾಗಿತ್ತು. ಯಾವುದೇ ರೀತಿಯ ಪ್ರಜಾಸತ್ತಾತ್ಮಕ ಹಕ್ಕುಗಳಾಗಲಿ, ಸ್ವಾತಂತ್ರ್ಯಗಳಾಗಲಿ ಇರಲಿಲ್ಲ.

ಇದು ತೆಲಂಗಾಣಾದಲ್ಲಿ 40ರ ದಶಕದ ಆರಂಭದಲ್ಲಿದ್ದ ಪರಿಸ್ಥಿತಿ. ಇದೇ ತೆಲಂಗಾಣಾ ರೈತರ ಸಶಸ್ತ್ರ ಹೋರಾಟದ ಹಿನ್ನೆಲೆ.

ಪಾಳೆಯಗಾರಿ ಪದ್ಧತಿಯ ಈ ಕಾರ್ಯಗಳು ಮತ್ತು ನಿಜಾಮನ ಸರ್ವಾಧಿಕಾರದ ವಿರುದ್ಧ ಈ ಮೊದಲೇ ಹಲವು ದಂಗೆಗಳಾಗಿದ್ದವು. ಆದರೆ ಅವು ಇಡೀ ವ್ಯವಸ್ಥೆಯನ್ನು ಅಲುಗಾಡಿಸುವಷ್ಟು ಶಕ್ತವಾಗಿರಲಿಲ್ಲ.

ಆಂಧ್ರ ಮಹಾಸಭಾದ ಉದಯ

ರಾಷ್ಟ್ರದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯಿಂದ ಆಕರ್ಷಿತರಾದ, ಪ್ರಭಾವಿತರಾದ ಹಲವು ಉದಾರವಾದಿ ಬುದ್ಧಿಜೀವಿಗಳು 1928ರಲ್ಲಿ ಆಂಧ್ರ ಮಹಾಸಭಾ ಎಂಬ ಸಾಂಸ್ಕೃತಿಕ ಸಂಸ್ಥೆಯನ್ನು ಕಟ್ಟಿದರು. ಆರಂಭದಲ್ಲಿ ಇದು ಸಾಂಸ್ಕೃತಿಕ ವಿಷಯಗಳಿಗೆ ಸೀಮಿತಗೊಳಿಸಿಕೊಂಡರೂ, 30ರ ದಶಕದುದ್ದಕ್ಕೂ ಹೈದರಾಬಾದಿನ ದಮನಕಾರಿ ರಾಜಕೀಯ ಪರಿಸ್ಥಿತಿಯಲ್ಲಿ, ಇದು ವಿದ್ಯಾರ್ಥಿಗಳು, ಮಧ್ಯಮವರ್ಗದವರು, ರೈತರು ಸಣ್ಣ ವ್ಯಾಪಾರಿಗಳು, ಕುಲಕಸುಬಿಗರು ಇವರ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳ ಕೇಂದ್ರ ಬಿಂದುವಾಗಿ ಬೆಳೆಯಿತು. ಈ ಸಮಯದಲ್ಲಿ ಆಂಧ್ರಮಹಾಸಭಾದ ಯುವಕ ಹಾಗೂ ಪ್ರಗತಿಗಾಮಿ ಕಾರ್ಯಕರ್ತರು ಎಲ್ಲಾ ಜನವಿಭಾಗಗಳನ್ನು ಅದರಲ್ಲೂ ರೈತರನ್ನು ಅವರ ಬೇಡಿಕೆಗಳಿಗೆ ಸಂಘಟಿಸುತ್ತಾ, ಅದನ್ನು ವಿಶಾಲ ತಳಹದಿಯ ರಾಜಕೀಯ ಸಂಘಟನೆಯಾಗಿ ಬೆಳೆಸಿದರು. ಇವರಲ್ಲಿ ಹಲವರು ಕಮ್ಯುನಿಸ್ಟ್ ಪಕ್ಷದೆಡೆಗೆ ಆಕರ್ಷಿತರಾಗಿ ಅದನ್ನು ಸೇರುವುದರೊಂದಿಗೆ ಆಂಧ್ರಮಹಾಸಭಾದ ನಾಯಕತ್ವ ಕಮ್ಯುನಿಸ್ಟರ ಕೈಯಲ್ಲಿ ಬಂತು.

4 ದ ಆರಂಭ ಭಾಗದಲ್ಲಿ 'ಸಂಘಂ' (ಜನ ಆಂಧ್ರಮಹಾಸಭಾವನ್ನು ಹೀಗೆ ಕರೆಯುತ್ತಿದ್ದರು) ವೆಟ್ಟಿ ಪದ್ಧತಿಯ ವಿರುದ್ಧ, ರೈತರ ಒಕ್ಕಲು ಎಬ್ಬಿಸುವಿಕೆಯ ವಿರುದ್ಧ, ಭ್ರಷ್ಟ ಅಧಿಕಾರಿಗಳ ವಿರುದ್ಧ, ನಿಜಾಮನ ದುರಾಡಳಿತದ ವಿರುದ್ಧ ಹೋರಾಟದಿಂದ ಬೆಳೆಯುತ್ತಾ ಹಳ್ಳಿಗಳಲ್ಲಿ ದೊಡ್ಡ ಬೆಂಬಲ ಪಡೆಯಿತು. ಅಲ್ಲಲ್ಲಿ ಭೂಮಾಲೀಕರ ಗೂಂಡಾಗಳನ್ನು ಎದುರಿಸಲು-ಹಲವು ಬಾರಿ ಹೊಡೆದಟ್ಟಲು ಶಕ್ತವಾಗಿತ್ತು. ಎರಡನೆಯ ಮಹಾಯುದ್ಧ ಮುಗಿದ ಕೂಡಲೇ ದೇಶದಾದ್ಯಂತ ಸಾಮ್ರಾಜ್ಯಶಾಹಿ ವಿರೋಧಿ ಅಲೆ ಎದ್ದಿತ್ತು. ಮಹಾಯುದ್ಧಾನಂತರ ಆರ್ಥಿಕ ಪರಿಸ್ಥಿತಿ ಉಲ್ಬಣವಾಗಿ ಒಂದು ಕ್ರಾಂತಿಕಾರಿ ಬಿಕ್ಕಟ್ಟು ಉಂಟಾಗಿತ್ತು. ಈ ಪರಿಸ್ಥಿತಿಯಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ದೇಶದಲ್ಲಿ ಬಹಳ ವ್ಯಾಪಕವಾಗಿ ಹರಡುತ್ತಿತ್ತು. ಈ ವ್ಯಾಪಕ ಹೋರಾಟದ ಅಂಗವಾಗಿ ಬ್ರಿಟೀಷರ ಮತ್ತು ಅವರ ಏಜೆಂಟರಾದ ಭೂಮಾಲೀಕರ ದಬ್ಬಾಳಿಕೆಯ ವಿರುದ್ಧ ಹಲವಾರು ಕಡೆ ರೈತರ ಹೋರಾಟಗಳು ಆರಂಭವಾಗಿ ಬಲಗೊಳ್ಳುತ್ತಿದ್ದವು. ಬಂಗಾಳದಲ್ಲಿ ತೇಭಾಗ ಚಳುವಳಿ, ಮಹಾರಾಷ್ಟ್ರದ ವಾರಲೀಯರ ಹೋರಾಟ ಮತ್ತು ತೆಲಂಗಾಣಾ ಹೋರಾಟ ಆ ವ್ಯಾಪಕ ಹೋರಾಟದ ಭಾಗಗಳಾಗಿದ್ದವು. ಇವುಗಳಲ್ಲೆಲ್ಲಾ ತೆಲಂಗಾಣಾ ಹೋರಾಟವೇ ಅತಿ ವ್ಯಾಪಕವಾಗಿ ಮತ್ತು ಹೆಚ್ಚು ಕಾಲಾವಧಿ ನಡೆದದ್ದರಿಂದ ಮಾತ್ರವಲ್ಲದೆ, ಸಾಧನೆಗಳ ದೃಷ್ಟಿಯಿಂದಲೂ ಗಮನಾರ್ಹವಾದುದು.

ಕಿಡಿ

ತೆಲಂಗಾಣಾ ಸಶಸ್ತ್ರ ಹೋರಾಟಕ್ಕೆ ಕಿಡಿಯಾದ ಘಟನೆ ಜುಲೈ 4,1946 ರಂದು ನಡೆಯಿತು. ನಾಲ್ಗೊಂಡಾ ತಾಲ್ಲೂಕಿನ ವಿಸನೂರಿ ರಾಮಚಂದ್ರ ರೆಡ್ಡಿ (ಇವನು 40,000 ಎಕರೆ ಜಮೀನಿನ ಮಾಲೀಕ) ಎಂಬ ಕುಖ್ಯಾತ ದೇಶಮುಖನ ಸಶಸ್ತ್ರ ಗೂಂಡಾಗಳು ಐಲಮ್ಮ ಎಂಬ ರೈತ ಮಹಿಳೆಯ ಹೊಲಕ್ಕೆ ಬೆಳೆ ಲೂಟಿಮಾಡಲು ಬಂದಾಗ ಕಮ್ಯುನಿಸ್ಟ್ ಪಕ್ಷ ಮತ್ತು ಆಂಧ್ರಮಹಾಸಭಾದ ಸ್ವಯಂಸೇವಕರು ಅವರನ್ನು ಹಿಮ್ಮೆಟ್ಟಿಸಿದರು. ಅದೇ ದಿನ ಆ ಆಕ್ರಮಣವನ್ನು ಪ್ರತಿಭಟಿಸಲು ನಡೆದ ಶಾಂತಿಯುತ ಮೆರವಣಿಗೆಯ ಮೇಲೆ ದೇಶಮುಖನ ಸಶಸ್ತ್ರ ಗೂಂಡಾಗಳು ದಾಳಿ ಮಾಡಿ, ಮೆರವಣಿಗೆಯ ನಾಯಕತ್ವ ವಹಿಸಿದ್ದ ದೊಡ್ಡಿ ಕೊಮುರಯ್ಯ ಎಂಬುವರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಇದರಿಂದ ರೊಚ್ಚಿಗೆದ್ದ ಜನಸಮೂಹ ಸಿಕ್ಕಿದ ಆಯುಧ (ಲಾಟಿ ಇತ್ಯಾದಿ)ಗಳಿಂದಗೂಂಡಾಗಳನ್ನು ಬಡಿದೋಡಿಸಿತು. ದೊಡ್ಡಿ ಕೊಮುರಯ್ಯ ಹುತಾತ್ಮರಾದ ಈ ದಿನದಿಂದ ಪ್ರತಿಭಟನಾ ಸಭೆ ಮೆರವಣಿಗೆಗಳು ನಡೆದವು. ಈ ಘಟನೆ ಈ ಪ್ರದೇಶದ ರೈತರನ್ನೆಲ್ಲಾ ರೊಚ್ಚಿಗೆಬ್ಬಿಸಿತು. ದೊಡ್ಡಿ ಕೊಮುರಯ್ಯ ಅವರ ಮೇಲಿನ ಹಾಡುಗಳು ಎಲ್ಲೆಲ್ಲಿ ಕೇಳಿಬರತೊಡಗಿದವು. ಪ್ರತಿಹಳ್ಳಿಯಲ್ಲಿ ಆ ಹಳ್ಳಿಯ ಭೂಮಾಲೀಕನ ಅಥವಾ ದೇಶಮುಖನ ಅರಮನೆಯಂತಹ ಮನೆಗಳ ಎದುರಿನಲ್ಲೇ ಕೆಂಬಾವುಟ ಹಾರಿಸಿ ಇಲ್ಲಿ 'ಸಂಘಂ' ಸಂಘಟಿಸಲಾಗಿದೆ. ಇನ್ನು ಮೇಲೆ ವೆಟ್ಟಿ ಇಲ್ಲ. ಕಾನೂನುಬಾಹಿರ ಕಡ್ಡಾಯ ತೆರಿಗೆ ಕಂದಾಯಗಳಿಲ್ಲ, ಒಕ್ಕಲೆಬ್ಬಿಸುವಿಕೆ ಇಲ್ಲ." ಎಂದು ಘೋಷಿಸುತ್ತಿದ್ದರು. ಜನರ ಈ ಚಳುವಳಿಯಿಂದಾಗಿ ಸರಕಾರ ಧಾನ್ಯ ಲೆವಿ ವಸೂಲಿ ಮಾಡಲಾಗಲಿಲ್ಲ. ಹಲವು ಕಡೆ ಭೂಮಾಲೀಕರು ಮತ್ತು ದೇಶಮುಖರನ್ನು ಹಳ್ಳಿಗಳಿಂದ ಓಡಿಸಲಾಯಿತು. ಅಥವಾ ಅವರೇ ಹತ್ತಿರದ ಪಟ್ಟಣಗಳಿಗೆ ಓಡಿಹೋದರು ಹಳ್ಳಿಗಳಲ್ಲಿ ಉಳಿದ ಭೂಮಾಲೀಕರು ಸಹ ಪೂರ್ಣವಾಗಿ ಅಧಿಕಾರ ಹೀನರಾಗಿದ್ದರು. ಈ ಪೂರ್ಣ ಪ್ರಮಾಣದ ಕೃಷಿಕ ದಂಗೆ (agrarian revolt)ಗೆ ಉತ್ತರವಾಗಿ ನಿಜಾಮ ಸರಕಾರ 'ಸಂಘಂ' ಮತ್ತು ಕಮ್ಯುನಿಸ್ಟ್ ಕಾರ್ಯಕರ್ತರ ಸಾಮೂಹಿಕ ಶೋಧನೆ, ಬಂಧನ, ಭಯೋತ್ಪಾದನೆಗೆ ತೊಡಗಿತು. ನಿಜಾಮನ ಪೋಲೀಸು ಮತ್ತು ಸೈನ್ಯಗಳು ಜನರ ಮೇಲೆ ಆಕ್ರಮಣ ನಡೆಸತೊಡಗಿದವು. ಜನಸಮೂಹ ಗೂಂಡಾಗಳನ್ನು, ನಿಜಾಮನ ಪೋಲೀಸು, ಮಿಲಿಟರಿ ದಾಳಿಗಳನ್ನು ಲಾಠಿ ಇತ್ಯಾದಿಗಳಿಂದಲೇ ಎದುರಿಸುತ್ತಿದ್ದರು. ಈ ಅವಧಿಯಲ್ಲಿ ಸಂಘಂ ಮತ್ತು ಪಾರ್ಟಿಯಿಂದ ಲಾಠಿ ಚಲಾಯಿಸಲು ತರಬೇತಿ ಪಡೆದ ರೈತ ಸ್ಕ್ವಾಡುಗಳು ಜನರ ರಕ್ಷಣಾ ಕಾರ್ಯ ಮಾಡುತ್ತಿದ್ದವು. ದೊಡ್ಡ ಪ್ರಮಾಣದಲ್ಲಿ ಕಾರ್ಯಕರ್ತರ ಬಂಧನ, ಚಿತ್ರಹಿಂಸೆ, ಜನರ ಮೇಲೆ ಸತತ ಆಕ್ರಮಣ ನಡೆದಾಗ್ಯೂ ಚಳುವಳಿ ಪಾಳೆಯಗಾರಿ ಭೂಮಾಲಕತ್ವ ರದ್ದುಗೊಳಿಸುವ ಚಳುವಳಿಯಾಗಿ ಮುಂದುವರಿಯಿತು. ತೆಲಂಗಾಣಾ ಹೋರಾಟದ ಈ ಮೊದಲ ಘಟ್ಟದಲ್ಲಿ (1946 ಜುಲೈನಿಂದ 1947 ಆಗಸ್ಟ್ ವರೆಗೆ) ಪ್ರತಿರೋಧಕ್ಕೆ ಮದ್ದುಗುಂಡುಗಳ ಶಸ್ತ್ರಾಸ್ತ್ರ (ಕೊನೆಯ ಒಂದೆರಡು ತಿಂಗಳು ಅದೂ ಸಣ್ಣ ಪ್ರಮಾಣದಲ್ಲಿ ಬಿಟ್ಟರೆ)ಗಳನ್ನು ಬಳಸಲಿಲ್ಲ. ಮಹಿಳೆಯರೂ ದೊಡ್ಡ ಪ್ರಮಾಣದಲ್ಲಿ ಪ್ರತಿರೋಧ ಕಾರ್ಯಾಚರಣೆಯಲ್ಲಿ ಪುರುಷರೊಡನೆ ಕೆಲಸ ಮಾಡಿದರು. ಈ ಅವಧಿಯಲ್ಲೇ ಹೊಸ ಜಾನಪದ ಹಾಡುಗಳು ಮತ್ತು ಇತರ ಜಾನಪದ ಕಲೆಗಳನ್ನು ಬೆಳೆಸಿದ ದೊಡ್ಡ ಸಾಂಸ್ಕೃತಿಕ ಚಳುವಳಿ ಸಹ ಆರಂಭವಾಯಿತು.

ಸಶಸ್ತ್ರ ವಿಮುಕ್ತಿ ಹೋರಾಟ

ಆಗಸ್ಟ್ 1947ರಲ್ಲಿ ರಾಷ್ಟ್ರಮಟ್ಟದಲ್ಲಿ ನೆಹರೂ ನಾಯಕತ್ವದಲ್ಲಿ ಕಾಂಗ್ರೆಸ್ ಸರಕಾರಕ್ಕೆ ಅಧಿಕಾರ ಹಸ್ತಾಂತರವಾಗಿ, ಹೆಚ್ಚಿನ ಸ್ಥಳೀಯ ರಾಜರುಗಳು ಅಗಾಧ ರಾಜಧನ ಪಡೆಯುವ ಭರವಸೆಯ ಮೇಲೆ ಭಾರತದ ಒಕ್ಕೂಟಕ್ಕೆ ಸೇರಲು ಒಪ್ಪಿದರೂ, ಹೈದರಾಬಾದಿನ ನಿಜಾಮ ಇದಕ್ಕೆ ನಿರಾಕರಿಸಿದ್ದರಿಂದ ಹೈದರಾಬಾದಿನ ರಾಜಕೀಯ ಪರಿಸ್ಥಿತಿಯಲ್ಲಿ ಗಮನಾರ್ಹ ಬದಲಾವಣೆ ಉಂಟಾಯಿತು. ಹೈದರಾಬಾದಿನ ನಿಜಾಮನ ಮೇಲೆ ಸಾರ್ವಜನಿಕ ಒತ್ತಡ ತರಲು ಕಾಂಗ್ರೆಸ್ ತನ್ನ ರಾಜ್ಯ ಶಾಖೆಯ ಮೂಲಕ ಚಳುವಳಿ ನಡೆಸಲು ನಿರ್ಧರಿಸಿತು. ಈ ಚಳುವಳಿಗೆ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳ ಬೆಂಬಲವಿತ್ತು. ಇದರಿಂದಾಗಿ ತೆಲಂಗಾಣಾ ಹೋರಾಟದ ಬೆಳವಣಿಗೆಗೆ ಹೊಸ ಅವಕಾಶ ಸಿಕ್ಕಿದಂತಾಯ್ತು. ಕಮ್ಯುನಿಸ್ಟ್ ಪಕ್ಷ ಮತ್ತು ಸಂಘಂ ಸ್ವಾಭಾವಿಕವಾಗಿ ಈ ಆಂದೋಲನದಲ್ಲಿ ಭಾಗವಹಿಸಲು ನಿರ್ಧರಿಸಿತು. ಈಗಾಗಲೇ ಪಾರ್ಟಿ ಮತ್ತು ಸಂಘಂ ಇವೆರಡು ತೆಲಂಗಾಣಾದಲ್ಲಿ ದೊಡ್ಡ ರಾಜಕೀಯ ಶಕ್ತಿಯಾಗಿದ್ದರಿಂದ ಈ ಆಂದೋಲನದಲ್ಲಿ ಮುಖ್ಯ ಧ್ವನಿ ಇವರದ್ದೇ ಆಯಿತು. ಶಾಲೆ ಕಾಲೇಜುಗಳಿಗೆ ಬಹಿಷ್ಕಾರ, ಹೈದರಾಬಾದು-ಭಾರತದ ಗಡಿ ಉಲ್ಲಂಘನೆ, ಭಾರತದ ಒಕ್ಕೂಟದೊಂದಿಗೆ ಹೈದರಾಬಾದಿನ ವಿಲೀನ, ಹೈದರಾಬಾದು ರಾಜ್ಯ ವಿಸರ್ಜಿಸಿ ಭಾಷಾವಾರು ರಾಜ್ಯಗಳಾಗಿ ದೇಶದ ಪುನರ್ವಿಂಗಡಣೆ ಮುಂತಾದವು ಈ ಚಳುವಳಿಯ ಮುಖ್ಯ ಅಂಗಗಳಾದವು. ಈ ಆಂದೋಲನವನ್ನು ಕಾಂಗ್ರೆಸ್ ಜತೆ ಜಂಟಿ ಕಾರ್ಯಕ್ರಮಗಳಿಗೆ ಸೀಮಿತಗೊಳಿಸದೆ ಪೂರ್ಣ ಪ್ರಮಾಣದ ಪಾಳೆಯಗಾರಿ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯಾಗಿ ಮಾರ್ಪಡಿಸಲಾಯ್ತು. ಈ ಎರಡನೆಯ ಘಟ್ಟದ ಚಳುವಳಿ ಬದಲಾದ ರಾಜಕೀಯ ಪರಿಸ್ಥಿತಿಯಿಂದಾಗಿ ಬಹಳ ಆಳವಾಗಿ ಹಾಗೂ ವ್ಯಾಪಕವಾಗಿ ರಾಜ್ಯದ ತುಂಬೆಲ್ಲ ಹರಡಿತು. ಇನ್ನೂ ಹೆಚ್ಚು ಜನವಿಭಾಗಗಳು ಚಳುವಳಿಯಲ್ಲಿ ಭಾಗವಹಿಸುವಂತಾಯಿತು.

ಇದರಿಂದ ಗಾಬರಿಗೊಂಡ ನಿಜಾಮ ಸರ್ಕಾರ ಕಾಸಿಂ ರಿಜವೀ ಎಂಬುವನ ನಾಯಕತ್ವದಲ್ಲಿ ಮುಸ್ಲಿಂ ಮತಾಂಧ ರಜಾಕಾರ ಪಡೆಯೊಂದನ್ನು ಕಟ್ಟಿ ಪೋಲೀಸು ಮಿಲಿಟರಿ ಬೆಂಬಲದೊಂದಿಗೆ ಮೂಲೆಮೂಲೆಗೂ ಕಳಿಸಿದ. ರಜಾಕಾರರು ರಾಜ್ಯಾದ್ಯಂತ ಸಾಮೂಹಿಕ ಕೊಲೆ, ಲೂಟಿ, ಮಾನಭಂಗ, ಸುಡುವಿಕೆ ಮುಂತಾದ ಅತ್ಯಾಚಾರಗಳಲ್ಲಿ ತೊಡಗಿದರು. ಇವರ ವಿರುದ್ಧ ಮದ್ದುಗುಂಡುಗಳ ಶಸ್ತ್ರಾಸ್ತ್ರ ಪ್ರಯೋಗ ಅನಿವಾರ್ಯವಾಯಿತು. ಪಾರ್ಟಿ ಮತ್ತು ಆಂಧ್ರಮಹಾಸಭಾ 10,000 ಬಲವುಳ್ಳ ಗ್ರಾಮ ಸ್ಕ್ವಾಡುಗಳು ಹಾಗೂ 2000 ಗರಿಲ್ಲಾ ಸ್ಕ್ವಾಡುಗಳನ್ನು ಸಂಘಟಿಸಲಾಯಿತು. ಈ ಸ್ಕ್ವಾಡು

ಗಳು ಬಂದೂಕಗಳನ್ನು ಹೊಂದಿದ್ದವು. ಗ್ರಾಮ ಸ್ಕ್ವಾಡುಗಳು ಹಳ್ಳಿಗಳಲ್ಲಿ ಇದ್ದು ಗ್ರಾಮರಕ್ಷಣೆ ಮಾಡಿದರೆ, ಗೆರಿಲ್ಲಾ ಸ್ಕ್ವಾಡುಗಳು ಪ್ರದೇಶದಿಂದ ಪ್ರದೇಶಕ್ಕೆ ಚಲಿಸುತ್ತಾ ಪೋಲೀಸು ಮಿಲಿಟರಿಗಳ ಮೇಲೆ ಅನಿರೀಕ್ಷಿತ ದಾಳಿ ನಡೆಸುತ್ತಾ ಗೆರಿಲ್ಲಾ ಹೋರಾಟ ನಡೆಸುತ್ತಿದ್ದವು. ಈ ಸ್ಕ್ವಾಡುಗಳ ಕಾರ್ಯಾಚರಣೆಗೆ ಜನಸಮೂಹ ಸಹಾಯ ಮಾಡುತ್ತಿತ್ತು. ಜನರೇ ಹಲವು ಕಡೆ ಅಸಾಂಪ್ರದಾಯಿಕ ಕ್ರಮಗಳಿಂದ ಪೋಲೀಸು, ಮಿಲಿಟರಿಗಳನ್ನು ಹಿಮ್ಮೆಟ್ಟಿಸುತ್ತಿದ್ದರು. ರಾತ್ರಿಕಾಲದಲ್ಲಿ ರಜಾಕಾರ, ಪೋಲೀಸು ಅಥವಾ ಮಿಲಿಟರಿ ಪಡೆಗಳು ವಿಶ್ರಮಿಸುತ್ತಿದ್ದಾಗ ಹತ್ತಿರದ ಹಳ್ಳಿಗಳ ಒಂದು ದೊಡ್ಡ ಗುಂಪು ಹೋಗಿ ಇಡೀ ಕ್ಯಾಂಪ್‌ಗೆ ಬೆಂಕಿಯಿಡುವುದು ಈ ಘಟ್ಟದಲ್ಲಿ ಜನರೇ ಕಂಡುಕೊಂಡ ಇಂತಹ ಒಂದು ಕ್ರಮ.

ಪಾಳೆಯಗಾರಿ ವಿರೋಧಿ ಕ್ರಮಗಳ ಜಾರಿ

1947 ಆಗಸ್ಟ್‌ನಿಂದ 1948 ಸೆಪ್ಟೆಂಬರ್‌ವರೆಗೆ ಇದ್ದ ಈ ಘಟ್ಟದಲ್ಲಿ ಸಶಸ್ತ್ರ ರೈತರು ಸಾಧ್ಯವಿರುವ ಎಲ್ಲಾ ಪಾಳೆಯಗಾರಿ-ವಿರೋಧಿ ಕ್ರಮಗಳನ್ನು ಜಾರಿಗೆ ತಂದರು. ಬಲಾತ್ಕಾರದ ಬಿಟ್ಟಿ ದುಡಿಮೆ, ಒಕ್ಕಲೆಬ್ಬಿಸುವಿಕೆ ಇವು ಸಂಪೂರ್ಣವಾಗಿ ನಿಂತುಹೋದವು. ಜಮೀನುದಾರರಿಗೆ ಕೊಡುತ್ತಿದ್ದ ಗೇಣಿ ಮತ್ತು ಕಂದಾಯಗಳಲ್ಲಿ ಕಡಿತದಿಂದ ಆರಂಭವಾಗಿ ಪೂರ್ಣವಾಗಿ ನಿಲ್ಲಿಸುವುದರಲ್ಲೂ ಚಳುವಳಿ ಸಫಲವಾಯಿತು. ಗೇಣಿಗೆ ಪಡೆದುಕೊಂಡಿದ್ದ ಜಮೀನನ್ನು ರೈತರು ಉಳಿಸಿಕೊಳ್ಳುವಂತಾಯಿತು. ಭೂಮಾಲೀಕರು ಕಸಿದುಕೊಂಡಿದ್ದ ರೈತರ ಜಮೀನುಗಳನ್ನು ಅವರಿಗೆ ವಾಪಸ್ಸು ಮಾಡಲಾಯಿತು. ಭೂಹಿಡುವಳಿ ಮಿತಿಯನ್ನು ಕಡ್ಡಾಯವಾಗಿ ಪೂರ್ಣವಾಗಿ ಜಾರಿಗೆ ತರಲಾಯಿತು. 100 ಎಕರೆ ಒಣ ಮತ್ತು 10 ಎಕರೆ ನೀರಾವರಿ ಇದು ಪರಮಾವಧಿ ಮಿತಿಯಾಗಿತ್ತು. ಹೀಗೆ ಸಿಕ್ಕಿದ ಹೆಚ್ಚುವರಿ ಜಮೀನು, ಮತ್ತು ಸರಕಾರ ಹಾಗೂ ಜಮೀನುದಾರರು ಖಾಲಿ ಬಿಟ್ಟಿದ್ದ ಜಮೀನು ಎಲ್ಲಾ ಸೇರಿಸಿ ಸುಮಾರು 10 ಲಕ್ಷ ಎಕರೆ ಜಮೀನನ್ನು ರೈತರಲ್ಲಿ ಹಂಚಲಾಯಿತು. ಈ ಭೂಸುಧಾರಣೆ, ಭೂಹಿಡುವಳಿಯ ಮಿತಿಯ ಕ್ರಮಗಳನ್ನು ಕಾರ್ಯಗತಗೊಳಿಸಿದ್ದ ರೈತ ಸಮಿತಿಗಳು ಎನ್ನುವುದು ಈ ಚಳುವಳಿಯ ವಿಶೇಷ ಎಲ್ಲಾ ಕ್ರಮಗಳಲ್ಲೂ ರೈತರನ್ನು ಮತ್ತು ಇತರ ಜನವಿಭಾಗಗಳನ್ನು ತೊಡಗಿಸಲಾಯಿತು. ಕುಖ್ಯಾತ ಜಮೀನುದಾರರ ಭಾರಿ ದವಸಧಾನ್ಯಗಳ ಕಣಜವನ್ನು ಸ್ವಾಧೀನ ಪಡಿಸಿಕೊಂಡು ಹಳ್ಳಿ ಬಡವರಿಗೆ ಹಂಚಲಾಯಿತು. ಕೃಷಿಕಾರ್ಮಿಕರಿಗೆ ಕೂಲಿ ಏರಿಸಲಾಯಿತು ಹಾಗೂ ಅದು ಜಾರಿಗೆ ಬರುವಂತೆ ನೋಡಿಕೊಳ್ಳಲಾಯಿತು. ಸುಮಾರು 16,000 ಚದರ ಮೈಲಿ ಹಾಗೂ 30 ಲಕ್ಷ ಜನಸಂಖ್ಯೆ ಇರುವ 3 ಜಿಲ್ಲೆಗಳಾದ ನಾಲ್ಗೊಂಡಾ, ವಾರಂಗಲ್ ಮತ್ತು ಖಮ್ಮಮ್‌ಗಳ 3000 ಹಳ್ಳಿಗಳಲ್ಲಿ ಈ 1-1½ ವರ್ಷಗಳ ಅವಧಿಯಲ್ಲಿ ರೈತಸಮಿತಿಗಳೇ ಎಲ್ಲಾ ಆಡಳಿತವನ್ನು ನಡೆಸಿದವು. ಗ್ರಾಮ ಪಂಚಾಯತುಗಳ ಮೇಲೆ ಆಧಾರಿತ ಗ್ರಾಮರಾಜ್ಯ ಸ್ಥಾಪಿಸಲಾಯಿತು. ಈ ಎಲ್ಲಾ ಕ್ರಮಗಳಿಂದ ಮಧ್ಯಮಕಾಲೀನ ಪಾಳೆಯಗಾರಿ ವ್ಯವಸ್ಥೆಯ ಮೇಲೆ ಆಧಾರಿತವಾದ ನಿಜಾಮನ ಆಡಳಿತ ಬುಡಸಹಿತವಾಗಿ ನಡುಗ ಹತ್ತಿತು.

'ಪೋಲೀಸು ಕಾರ್ಯಾಚರಣೆ'

1948ರ ಮಧ್ಯದ ಹೊತ್ತಿಗೆ ನಿಜಾಮನ ರಜಾಕಾರ ಪಡೆ, ಸೈನ್ಯ, ಪೋಲೀಸು ಪಡೆಗಳ ಮೇಲೆ ದಿನದಿಂದ ದಿನಕ್ಕೆ ಹೊಸ ವಿಜಯಗಳನ್ನು ಪಡೆಯುತ್ತಾ ತೆಲಂಗಾಣಾ ರೈತರ ಸಶಸ್ತ್ರ ಹೋರಾಟ ಮುನ್ನಡೆದಿತ್ತು. 2-3 ಜಿಲ್ಲೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಆಂಧ್ರಮಹಾಸಭಾ ರೈತಸಮಿತಿಗಳ ಮೂಲಕ ರಾಜಕೀಯ ಆಡಳಿತ ನಡೆಸುತ್ತಿತ್ತು. ಇದು ಇನ್ನೂ ಹಲವು ಜಿಲ್ಲೆಗಳಿಗೆ ಹರಡುವ ಸಂಭವವಿತ್ತು. 1946 ರಲ್ಲಿ ಕೇಂದ್ರದಲ್ಲಿ ಬಂದ ಕಾಂಗ್ರೆಸ್ ಲೀಗ್ ಸರಕಾರಕ್ಕಾಗಲಿ, 47 ರಲ್ಲಿ ಬಂದ ಕಾಂಗ್ರೆಸ್ ಸರಕಾರಕ್ಕಾಗಲಿ ನಿಜಾಮನ ವಿರುದ್ಧ ಕಷ್ಟಕರ ಪರಿಸ್ಥಿತಿಯಲ್ಲಿ ಹೋರಾಡುತ್ತಿದ್ದ ತೆಲಂಗಾಣಾ ರೈತರಿಗೆ ಸಹಾಯ ಮಾಡುವುದು ಅಗತ್ಯವೆನಿಸಲಿಲ್ಲ. ಆದರೆ ತೆಲಂಗಾಣಾ ರೈತರ ಹೋರಾಟ ನಿಜಾಮನ ಮೇಲೆ ಪೂರ್ಣ ವಿಜಯ ಸಾಧಿಸುವ ಸೂಚನೆ ಕಂಡುಬಂದಾಗ ಬಂಡವಾಳಶಾಹಿ-ಜಮೀನುದಾರರ ಕಾಂಗ್ರೆಸ್ ಸರಕಾರ ಗಾಬರಿಗೊಂಡು "ಹೈದರಾಬಾದಿನ ಜನರ ಸಂಕಷ್ಟಗಳನ್ನು ಮನಗಂಡು" ಭಾರತದ ಸೈನ್ಯಪಡೆಗಳಿಗೆ ಹೈದರಾಬಾದು ರಾಜ್ಯದೊಳಗೆ ನುಗ್ಗಿ ವಶಪಡಿಸಿಕೊಳ್ಳಲು ಆಜ್ಞೆ ಮಾಡಿತು. ಇದನ್ನು ಕೇಂದ್ರ ಸರಕಾರ "ಪೋಲೀಸು ಕಾರ್ಯಾಚರಣೆ" ಎಂದು ಕರೆಯಿತು. ತೆಲಂಗಾಣಾ ರೈತರ ಹೋರಾಟದಿಂದ ಆಗಲೇ ಸುಸ್ತಾಗಿದ್ದ ನಿಜಾಮನ ಸೈನ್ಯ 5 ದಿನಗಳಲ್ಲೇ ಭಾರತದ ಸೈನ್ಯಗಳಿಗೆ ಶರಣಾಯಿತು.

ಆದರೆ ಮುಂದಿನ ಒಂದು ವಾರದೊಳಗೆ "ಪೋಲೀಸು ಕಾರ್ಯಾಚರಣೆ"ಯ ನಿಜವಾದ ಬಣ್ಣ ಬಯಲಾಯಿತು. ಭಯಾನಕ ಅಪರಾಧಗಳೆಸಗಿದ್ದ ನಿಜಾಮನ ಅಧಿಕಾರಿಗಳಿಗಾಗಲಿ, ರಜಾಕಾರರಿಗಾಗಲಿ ಹೆಚ್ಚಿನ ಶಿಕ್ಷೆಯೇನೂ ಆಗಲಿಲ್ಲ. ಅದರ ಬದಲು ಸೈನ್ಯ ತೆಲಂಗಾಣಾ ರೈತರ ಚಳುವಳಿಯ ವ್ಯವಸ್ಥಿತ ದಮನಕ್ಕೆ ತೊಡಗಿತು. ದೇಶಮುಖ್‌ಗಳು, ಜಮೀನುದಾರರುಗಳು ಸೈನ್ಯದ ಸಹಾಯದಿಂದ ತಮ್ಮ ಗ್ರಾಮಗಳಿಗೆ ಮರಳಿ ತಮ್ಮ ಜಮೀನು ಹಾಗೂ ಅಧಿಕಾರಗಳನ್ನು ಪುನಃ ಕಿತ್ತುಕೊಳ್ಳಲು ಪ್ರಯತ್ನಿಸಿದರು. ಸೈನ್ಯ ಕಮ್ಯುನಿಸ್ಟ್ ಮತ್ತು ಸಂಘಂ ಕಾರ್ಯಕರ್ತರನ್ನು ಶೋಧಿಸಿ, ಬಂಧಿಸ ಹತ್ತಿತು. ರಾಜಾಜಿ ಮತ್ತು ವಲ್ಲಭಭಾಯಿಪಟೇಲ್ "ರಜಾಕಾರರೊಂದಿಗೆ ಸೇರಿ ಜನರಿಗೆ ಉಪಟಳ ಕೊಡುತ್ತಿರುವ" ಕಮ್ಯುನಿಸ್ಟ್‌ರನ್ನು ಹತ್ತಿಕ್ಕುವುದು ಪೋಲೀಸು ಕಾರ್ಯಾಚರಣೆಯ ಉದ್ದೇಶ ಎಂದು ಬಹಿರಂಗವಾಗಿಯೇ ಹೇಳಿದರು. ಸುಮಾರು 50,000 ಸೈನಿಕರನ್ನು ಕಳಿಸಲಾಗಿತ್ತು. 7-8 ಹಳ್ಳಿಗಳಿಗೆ ಒಂದರಂತೆ ಮಿಲಿಟರಿ ಕ್ಯಾಂಪ್‌ಗಳನ್ನು ಸ್ಥಾಪಿಸಲಾಯಿತು. ಸಾಮೂಹಿಕ ಲೂಟಿ, ಕೊಲೆ, ಮಾನಭಂಗ, ಚಿತ್ರಹಿಂಸೆ ಮುಂತಾದ ಅತ್ಯಾಚಾರಗಳನ್ನು "ಸ್ವತಂತ್ರ" ಭಾರತದ ಸೈನ್ಯ ತೆಲಂಗಾಣಾ ಪ್ರಜೆಗಳ ಮೇಲೆ ಮಾಡಹತ್ತಿತು. ಇಷ್ಟೆಲ್ಲಾ 'ಸತತ ಹಾಗೂ ವ್ಯವಸ್ಥಿತ ದಮನದ ನಡುವೆ ಹಳೆಯ ಪ್ರದೇಶಗಳಲ್ಲಿ ಪಕ್ಷ ಹಾಗೂ ಸಂಘಂ ಸಾಕಷ್ಟು ಹತೋಟಿಯಲ್ಲಿತ್ತು. ಇನ್ನೂ ಹಲವು ಜಿಲ್ಲೆಗಳಿಗೆ ಚಳುವಳಿ ಹರಡಹತ್ತಿತ್ತು. ಭಾರತೀಯ ಸೈನ್ಯ ದೊಡ್ಡ ಪ್ರಮಾಣದಲ್ಲಿ ತೆಲಂಗಾಣಾ ರೈತರ ಮೇಲೆ ದಾಳಿ ನಡೆಸಲಾರಂಭಿಸಿದಾಗ ಸಂಘಂ ಮತ್ತು ಪಕ್ಷ ಭಾರತದ ಪಡೆಗಳ ವಿರುದ್ಧ 'ಸಶಸ್ತ್ರ ವಿಮುಕ್ತಿ ಹೋರಾಟ' ಮುಂದುವರೆಸಲು ನಿರ್ಧರಿಸಿತು. ಜನರು ಮತ್ತು ಗೆರಿಲ್ಲಾ ಸ್ಕ್ವಾಡ್‌ಗಳು 2-3 ವರ್ಷದ ಸತತ ಹೋರಾಟದ ಫಲವಾದ ಜಮೀನು ಮತ್ತು ಇತರ ಪ್ರಜಾಸತ್ತಾತ್ಮಕ ಹಕ್ಕು ಸ್ವಾತಂತ್ರ್ಯಗಳನ್ನು ಆರ್ಥಿಕ ಸವಲತ್ತುಗಳನ್ನು ಉಳಿಸಿಕೊಳ್ಳಲು 1948-51ರವರೆಗೆ ವೀರಾವೇಶದಿಂದ ಹೋರಾಡಿದರು. ಆದರೆ ಕಮ್ಯುನಿಸ್ಟ್ ಮತ್ತು ಸಂಘಂ ಕಾರ್ಯಕರ್ತರನ್ನು ಕಂಡಕಂಡಲ್ಲಿ ಬಂಧಿಸಲಾಗುತ್ತಿತ್ತು ಅಥವಾ ಕೊಲ್ಲಲಾಗುತ್ತಿತ್ತು. ಈ ಮಧ್ಯೆ 1950ರಲ್ಲಿ ನಿಜಾಮನನ್ನೇ ಹೈದರಾಬಾದು ರಾಜ್ಯದ ರಾಜಪ್ರಮುಖನನ್ನಾಗಿ ನೇಮಿಸಲಾಯ್ತು! ಒಂದು ಅಂದಾಜಿನ ಪ್ರಕಾರ 47-48ರ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಆದ ವೆಚ್ಚದಷ್ಟೇ ಈ ಪೋಲೀಸು ಕಾರ್ಯಾಚರಣೆಗೆ ವೆಚ್ಚವಾಯಿತಂತೆ. ದೊಡ್ಡ ಪ್ರಮಾಣದಲ್ಲಿ ನುರಿತ ಕಾರ್ಯಕರ್ತರ ಹಾನಿಯಿಂದಾಗಿ ಸಶಸ್ತ್ರ ಹೋರಾಟವನ್ನು ಮುಂದುವರೆಸುವುದು 1951ರ ಸುಮಾರಿಗೆ ಕಷ್ಟವಾಗುತ್ತಾ ಹೋಯಿತು. ಭಾರತದ ಸೈನ್ಯ ಹೈದರಾಬಾದಿಗೆ ನುಗ್ಗಿದ ಮೊದಲ ಕೆಲವು ತಿಂಗಳುಗಳಲ್ಲಿ ಅದು "ರಕ್ಷಕ ಸೈನ್ಯ" ಎಂಬ ಭ್ರಮೆ ಶಾಖೆ ಮತ್ತು ವಿಭಾಗ ಸ್ತರದ ಕಾರ್ಯಕರ್ತರಿಗೂ ಇದ್ದದ್ದರಿಂದ ಹಾಗೂ ಅದರಿಂದುಂಟಾದ ಸನ್ನದ್ಧಸ್ಥಿತಿಯ ಅಭಾವ, ಉದಾಸೀನ, ಕೆಲವೊಮ್ಮೆ ಶಸ್ತ್ರಗಳನ್ನು ಬಿಟ್ಟುಕೊಟ್ಟದ್ದು. ಮೊದಲ ದಿನಗಳಲ್ಲೇ ಹಲವಾರು ಕಾರ್ಯಕರ್ತರ ಬಂಧನ, ಕೊಲೆಗಳಾದವು. ಕಾರ್ಯಕರ್ತರ ಹಾನಿ, ಚಳುವಳಿ ಮುಂದುವರೆಸಲು ಕಮ್ಯುನಿಸ್ಟ್ ಪಕ್ಷದ ಕೇಂದ್ರ ಹಾಗೂ ರಾಜ್ಯದ ನಾಯಕತ್ವದ ಒಂದು ಗುಂಪಿನ ಸತತ ವಿರೋಧ ಮತ್ತು ವಾಸ್ತವವಾಗಿ ಅದು ಮಾಡಿದ ದ್ರೋಹದಿಂದ 1951 ಅಕ್ಟೋಬರ್ 20 ರಂದು ಸಶಸ್ತ್ರ ಹೋರಾಟವನ್ನು ಹಿಂತೆಗೆದುಕೊಳ್ಳಲಾಯ್ತು. ಹೈದರಾಬಾದಿನ ವಿಲೀನಕರಣವು ಹೊಸ ಶಕ್ತಿ ಮತ್ತು ರಾಜಕೀಯ ಸಂಬಂಧಗಳನ್ನು ಉಂಟುಮಾಡಿದ್ದು, ಹೋರಾಟಕ್ಕೆ ಪ್ರತಿಕೂಲವಾಯಿತು.

ಈ 5 ವರ್ಷದ ಸತತ ಹೋರಾಟದಲ್ಲಿ 4 ಸಾವಿರಕ್ಕೂ ಹೆಚ್ಚು ಜನ ಕಮ್ಯುನಿಸ್ಟ್ ಕಾರ್ಯಕರ್ತರ ಮತ್ತು ರೈತ ನಾಯಕರುಗಳ ಕೊಲೆಯಾಯಿತು. ಸುಮಾರು 10,000 ಕಮ್ಯುನಿಸ್ಟ್‌ರು ಮತ್ತು ರೈತ ಹೋರಾಟಗಾರರು 3-4 ವರ್ಷಗಳ ಜೈಲುವಾಸ ಅನುಭವಿಸಬೇಕಾಯಿತು. ಸುಮಾರು 50,000ಕ್ಕೂ ಜಾಸ್ತಿ ಜನ ಪೋಲೀಸು, ಮಿಲಿಟರಿ ಕ್ಯಾಂಪುಗಳಲ್ಲಿ ಭಯಾನಕ ಚಿತ್ರಹಿಂಸೆಗಳಿಗೆ ಗುರಿಯಾದರು. ಸಾವಿರಾರು ಮಹಿಳೆಯರು ಮಾನಭಂಗ, ಅವಮಾನಗಳಿಗೆ ಗುರಿಯಾದರು. ಈ ಅತ್ಯಾಚಾರಗಳನ್ನೆಲ್ಲಾ ಮೊದಲ ಎರಡು ವರ್ಷ ಗೂಂಡಾಗಳು, ರಜಾಕಾರರು, ನಿಜಾಮನ ಪೋಲೀಸು, ಸೈನ್ಯ ನಡೆಸಿದರೆ ಮುಂದಿನ ಮೂರುವರ್ಷಗಳ ಕಾಲ ಇವರೆಲ್ಲರನ್ನೂ ಮೀರಿಸುವಂತೆ ಭಾರತೀಯ ಸೈನ್ಯ ನಡೆಸಿತು. ಕುರಿಗಳಿಂದ ತೃಪ್ತರಾಗುವ ಜನ ಹೋಗಿ ಇಡಿ ಎಮ್ಮೆಯಿಂದ ಮಾತ್ರ ತೃಪ್ತರಾಗುವ ಜನ ಬಂದರು" (ಗೊರ್ರೆಲು ತಿನೆವಾಡು ಪೋಯಿ, ಬಾರ್ರೆಲು ತಿನೆವಾಡು ವಚ್ಚಾಡು) ಎಂದು ಜನ ಅಂದುಕೊಳ್ಳುವಂತಾಯಿತು. ನಮ್ಮ ಚರಿತ್ರೆಯ ಪಠ್ಯಪುಸ್ತಕಗಳಲ್ಲಿ ಭಾರತೀಯ ಸೈನ್ಯ 1948ರಲ್ಲಿ ಪೋಲೀಸು ಕಾರ್ಯಾಚರಣೆ ನಡೆಸಿ ಹೈದರಾಬಾದು ಭಾರತೀಯ ಒಕ್ಕೂಟಕ್ಕೆ ಸೇರುವಂತೆ ಮಾಡಿತು ಎಂದು ಮಾತ್ರ ಹೇಳಲಾಗುತ್ತದೆ. ಹೈದರಾಬಾದು ಭಾರತಕ್ಕೆ ಸೇರಲು ನಿಜವಾಗಿಯೂ ಕಾರಣವಾದ ತೆಲಂಗಾಣಾ ರೈತರ ಚಾರಿತ್ರಿಕ ಪಾಳೆಯಗಾರಿ ವಿರೋಧಿ, ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟವಾಗಲಿ, ಹೈದರಾಬಾದು ಭಾರತದ ಭಾಗವಾದ ನಂತರ 3 ವರ್ಷಗಳವರೆಗೆ ಸೈನ್ಯ ರೈತರ ಮೇಲೆ ನಡೆಸಿದ ಹತ್ಯಾಕಾಂಡವಾಗಲಿ ಅಲ್ಲಿ ಸ್ಥಾನ ಪಡೆಯದಿರುವುದು ನಮ್ಮ ಶಿಕ್ಷಣದಲ್ಲಿನ ವರ್ಗಧೋರಣೆಯನ್ನು ಸ್ಪಷ್ಟಪಡಿಸುತ್ತದೆ.

ತೆಲಂಗಾಣಾ ಹೋರಾಟದ ಪ್ರಾಮುಖ್ಯತೆ

ತೆಲಂಗಾಣಾ ರೈತರ ಸಶಸ್ತ್ರ ಹೋರಾಟವನ್ನು ಅದರ ಪ್ರಾಮುಖ್ಯತೆ ವ್ಯಾಪಕತೆಯ ದೃಷ್ಟಿಯಿಂದ 1857ರ ಪ್ರಥಮ ಸ್ವಾತಂತ್ರ್ಯ ಸಮರದೊಡನೆ ಮಾತ್ರ ಹೋಲಿಸಲು ಸಾಧ್ಯ. ಇವೆರಡೂ ಹೋರಾಟಗಳೂ ಜನಸಮೂಹ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳು. 1857ರ ಹೋರಾಟ ಅರಸುಗಳ, ಪಾಳೆಯಗಾರರ, ಬ್ರಿಟೀಷರಿಂದ ಪ್ರಾಮುಖ್ಯ ಕಳೆದುಕೊಂಡ ಧಾರ್ಮಿಕ ಶಕ್ತಿಗಳ ನಾಯಕತ್ವದಲ್ಲಿ ಬ್ರಿಟೀಷರ ಆಗಮನದಿಂದ ದಿವಾಳಿಯೆದ್ದ ಬಡರೈತರು ಕುಶಲ ಕುಲಕಸುಬಿಗರ ಮತ್ತು ಅತೃಪ್ತ ಸೈನಿಕರ ಬೆಂಬಲದಿಂದ ನಡೆದ ಹೋರಾಟ. ಈ ಹೋರಾಟದಲ್ಲಿ ಕೊನೆಯ ಬಾರಿಗೆ ಭಾರತದ ಹಳೆಯ ಪಾಳೆಯಗಾರಿ ವರ್ಗ ಬ್ರಿಟೀಷ್ ವಿರೋಧಿ ಹೋರಾಟಕ್ಕೆ ನಾಯಕತ್ವ ಕೊಟ್ಟು ಸೋತು, ಅವಮಾನಕಾರಿ ಒಪ್ಪಂದಕ್ಕೆ ಬಂದಿತು. ಈ ಅವಮಾನಕಾರಿ ಸಾಮ್ರಾಜ್ಯಶಾಹಿ-ಪಾಳೆಯಗಾರಿ ಒಪ್ಪಂದದ ಸಖ್ಯದ ವಿರುದ್ಧ ಸುಮಾರು ಮೂರುವರ್ಷಗಳ ನಂತರ, ಹೊಸದಾಗಿ ಹುಟ್ಟಿದ ಕಾರ್ಮಿಕ ವರ್ಗದ ಪಕ್ಷವಾದ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಪ್ರಥಮ ಬಾರಿ ರೈತ ಮತ್ತು ಇತರ ಜನಸಮೂಹ ನಡೆಸಿದ ಚಾರಿತ್ರಿಕ ಪಾಳೆಯಗಾರಿ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ. ಈ ಹೋರಾಟ ಆಕಸ್ಮಿಕವೂ ಅಲ್ಲ ಅಥವಾ ಕಮ್ಯುನಿಸ್ಟ್ ಪಕ್ಷದ ಅಥವಾ ಆಂಧ್ರಮಹಾಸಭಾದ ಶಿಶುವೂ ಅಲ್ಲ, ರೈತರು ಮತ್ತು ಮಧ್ಯಮಕಾಲೀನ ಜಮೀನುದಾರಿ ಪದ್ಧತಿಯಲ್ಲಿನ ವಿರುದ್ಧ; ಬಹುಸಂಖ್ಯಾತ ಹಿಂದೂ ಪ್ರಜೆಗಳು ಮತ್ತು ಮುಸ್ಲಿಂ ಏಕಾಧಿಕಾರಿ ರಾಜನ ನಡುವಿನ; ಬಹುಸಂಖ್ಯಾತ ತೆಲುಗು, ಮರಾಠಿ, ಕನ್ನಡ ಮಾತನಾಡುವ ಪ್ರಜೆಗಳು ಮತ್ತು ಆಡಳಿತ ಭಾಷೆ ಉರ್ದುನ ಹೇರಿಕೆಯಲ್ಲಿನ ವೈರುಧ್ಯ; ಅದೇ ತಾನೆ ಜನ್ಮತಾಳಿದ ಭಾರತದ ಒಕ್ಕೂಟ ಮತ್ತು ನಿಜಾಮನ ರಾಜ್ಯಾಡಳಿತದ ಹೈದರಾಬಾದು ರಾಜ್ಯ; ಹೀಗೆ ಬಹಳಷ್ಟು ವೈರುಧ್ಯಗಳು ಒಂದೇ ಕಾಲದಲ್ಲಿ, ಒಂದೇ ಪ್ರದೇಶದಲ್ಲಿ ಉತ್ಕಟಗೊಂಡಾಗ ಹುಟ್ಟಿದ ಚಳುವಳಿ ತೆಲಂಗಾಣಾ ರೈತರ ಸಶಸ್ತ್ರ ಹೋರಾಟ. ತೆಲಂಗಾಣಾ ಚಳುವಳಿಗೂ ಉಳಿದ ರೈತ ಚಳುವಳಿಗೂ ಇರುವ ಪ್ರಮುಖ ವ್ಯತ್ಯಾಸವೆಂದರೆ ಅದು ಜಾರಿಗೆ ತಂದ ವ್ಯಾಪಕ ಕೃಷಿಕ ಸುಧಾರಣೆಗಳು; 1-1½ ವರ್ಷಗಳ ರೈತರ ಸ್ವಯಮಾಡಳಿತದ ಪ್ರಯೋಗ; 5 ವರ್ಷ ಉತ್ಕೃಷ್ಟ ಮಟ್ಟದ ಸೈನ್ಯಕ್ಕೆ ಪ್ರತಿರೋಧ ಒಡ್ಡಿದ್ದು; ಅದರ ನಾಯಕತ್ವ ಕಾರ್ಮಿಕವರ್ಗದ ಪಕ್ಷದ ಕೈಯಲ್ಲಿ ಇದ್ದದ್ದು.

ತೆಲಂಗಾಣಾ ಹೋರಾಟ ಇನ್ನೂ ಹಲವು ಕಾರಣಗಳಿಗೆ ಗಮನಾರ್ಹವಾದದ್ದು. ಇದು ಮೊದಲ ಬಾರಿಗೆ ಭಾರತದ ಸಮಸ್ಯೆಗಳನ್ನು ಪರಿಹರಿಸಲು ದೇಶದ ಕೃಷಿ ಸಂಬಂಧಗಳಲ್ಲಿ ಕ್ರಾಂತಿಕಾರಕ ಬದಲಾವಣೆಯ ಅನಿವಾರ್ಯತೆ ಮತ್ತು ತುರ್ತು ಅಗತ್ಯತೆಯನ್ನು ಬಲವಾಗಿ ದೇಶದ ಮುಂದಿರಿಸಿತು. ಕಾಂಗ್ರೆಸ್‌ನಂತಹ ಬಂಡವಾಳಶಾಹಿ-ಜಮೀನುದಾರಿ ಪಕ್ಷಗಳು ಸಹ ಭೂಸುಧಾರಣೆಯನ್ನು ಧೋರಣೆಯಾಗಿ ಅಂಗೀಕರಿಸಿದ್ದು ಈ ಹೋರಾಟದ ನೇರ ಫಲ. ಮುಂದೆ ಕಾಂಗ್ರೆಸ್ ಸರಕಾರಗಳು ಮಾಡಿದ ಅರೆಮನಸ್ಸಿನ, ತಡವರಿಕೆಯ, ಅಸಮರ್ಪಕ ಭೂಸುಧಾರಣೆಯ ಪ್ರಯತ್ನಗಳು ತೆಲಂಗಾಣಾ ಹೋರಾಟದಂತಹ ವ್ಯಾಪಕ ಹೋರಾಟದ ಬೆದರಿಕೆಯಿಂದ ಆದಂತಹವು, ವಿನೋಬಾರ ವಂಚನೆಯ ಮತ್ತು ಕನಸಿನ ಲೋಕದ ಭೂದಾನ, ಗ್ರಾಮದಾನ "ಚಳುವಳಿ"ಗಳು ಸಹ ಈ ಹೋರಾಟದ ಭಯದಿಂದ ಹುಟ್ಟಿದಂತಹುದು.

ಪ್ರಸ್ತುತ ಕೃಷಿ ಸಂಬಂಧಗಳು

ಈಗ 30 ವರ್ಷದ ಕಾಂಗ್ರೆಸ್ ಮತ್ತಿತರ ಬಂಡವಾಳಶಾಹಿ-ಜಮೀನುದಾರಿ ಪಕ್ಷಗಳ ಭೂಸುಧಾರಣೆ, ಭೂಹಿಡುವಳಿ ಮಿತಿ, ಕೃಷಿಕಾರ್ಮಿಕರ ಕನಿಷ್ಠ ವೇತನ ಕಾನೂನುಗಳ "ಜಾರಿ" ಮತ್ತು

ವಿನೋಬಾರ ಭೂದಾನ, ಗ್ರಾಮದಾನಗಳ ದಾಖಲೆ ನೋಡೋಣ. ಈಗ ಹಳ್ಳಿಯ ಮೇಲಿನ 5% ಜಮೀನುದಾರರು ಒಟ್ಟು ಜಮೀನಿನ 25% ಕ್ಕೂ ಹೆಚ್ಚಿಗೆ ಜಮೀನು ಹೊಂದಿದ್ದರೆ ಕೆಳಗಿನ 67% ರೈತರು 14% ಕ್ಕೂ ಕಡಿಮೆ ಜಮೀನು ಹೊಂದಿದ್ದಾರೆ. 1961 ರಲ್ಲಿ 18% ಇದ್ದ ಭೂಹೀನರ ಸಂಖ್ಯೆ 1971ರ ಹೊತ್ತಿಗೆ 30% ಕ್ಕೇರಿದೆ. ಸ್ವಂತ ಜಮೀನು ಕೃಷಿ ಮಾಡುವವರ ಸಂಖ್ಯೆ 60%ದಿಂದ 50%ಕ್ಕೆ ಇಳಿದಿದೆ. ಕೆಲವು ರಾಜ್ಯಗಳಲ್ಲಿ ಭೂಹೀನರು ಹಳ್ಳಿಯ ಜನಸಂಖ್ಯೆಯ 50ಶೇಕಡಾ ಇದ್ದಾರೆ. 1951ರಲ್ಲಿ ಭೂಹಿಡುವಳಿ ಮಿತಿ ಜಾರಿಗೆ ತಂದರೆ 630 ಲಕ್ಷ ಎಕರೆ ಜಮೀನು ಪುನಃ ಹಂಚಿಕೆಗೆ ಸಿಗುತ್ತದೆ ಎಂದು ಅಂದಾಜು ಮಾಡಲಾಗಿತ್ತು. ಆದರೆ ಈಗ ಕೇವಲ 38 ಲಕ್ಷ ಎಕರೆ ಜಮೀನು ಮಾತ್ರ ಸಿಗಬಹುದು ಎಂದು ಕೃಷಿ ಇಲಾಖೆ ತಿಳಿಸಿದರೆ, 200 ಲಕ್ಷ ಎಕರೆ ಸಿಗುತ್ತದೆ ಎಂದು ಯೋಜನಾ ಕಮಿಶನ್ ತಿಳಿಸುತ್ತದೆ. ಆದರೆ 1955-70ರ ಅವಧಿಯಲ್ಲಿ ನಡೆದ ಜಾಲಿ ಜಮೀನು ವರ್ಗಾವಣೆಗಳು, ಸುಳ್ಳು ಜಮೀನು ದಾಖಲೆಗಳು, ಮತ್ತು ಹತ್ತಿರದ ಸಂಬಂಧಿಗಳ ಹೆಸರಿನಲ್ಲಿ ವರ್ಗಾವಣೆ ಇತ್ಯಾದಿಗಳಿಂದ "ಮಾಯವಾದ" ಜಮೀನು ಗಮನಿಸಿದರೆ ಈಗಲೂ 550 ಲಕ್ಷ ಎಕರೆ ಸಿಗುತ್ತದೆ ಎಂದು ಅಂದಾಜು ಹಾಕಲಾಗಿದೆ.

ಇವಲ್ಲದೆ 60ರ ದಶಕದಲ್ಲಿ ಭಾರತ "ಹಸಿರು ಕ್ರಾಂತಿ"ಯನ್ನು ಸಾಧಿಸಿದೆ ಎನ್ನಲಾಗಿದೆ. ಸಣ್ಣ ಮತ್ತು ದೊಡ್ಡ ನೀರಾವರಿ ಯೋಜನೆಗಳು, ಕೃಷಿ ಸಲಕರಣೆಗಳಿಗೆ ನೀಡಿದ ಸಬ್ಸಿಡಿ, ಸಾಲದ ಪೂರೈಕೆ, ಕೃಷಿ ವಿಧಾನಗಳಲ್ಲಿ ಸುಧಾರಿತ ಬೀಜ ಇತ್ಯಾದಿ ತಂತ್ರಜ್ಞಾನದ ಲಾಭ ಮುಂತಾದ ಹಸಿರು ಕ್ರಾಂತಿಯ ಅವಧಿಯಲ್ಲಿ ಮೊದಲು ಹಾಗೂ ಅನಂತರದ ಕ್ರಮಗಳ ಲಾಭವೆಲ್ಲಾ 5% ಜಮೀನುದಾರರ ಮತ್ತು ಶ್ರೀಮಂತ ರೈತರ ಜೇಬಿಗೆ ಹೋಗಿದೆ ಎಂಬುದು ಈಗ ಬಹಿರಂಗ ಗುಟ್ಟು. ಇದರಿಂದ ಮಧ್ಯಮ ಮತ್ತು ಬಡರೈತರಿಗಾಗಲಿ, ಕೃಷಿಕಾರ್ಮಿಕರಿಗಾಗಲಿ ಸೋರಿ ಬಂದ ಸಣ್ಣ ಪಾಲು ಬಿಟ್ಟರೆ ಬೇರೇನೂ ದೊರೆತಿಲ್ಲ. ಇತ್ತೀಚೆಗೆ ನಡೆಸಿದ ಅಧ್ಯಯನಗಳ ಪ್ರಕಾರ ಮಧ್ಯಮ ಮತ್ತು ಬಡರೈತರಿಗೆ ಸ್ವಂತ ಜಮೀನು ಉಳಿಸಿಕೊಂಡು ಬೇಸಾಯ ನಡೆಸುವುದೇ ದಿನೇ ದಿನೇ ಕಷ್ಟವಾಗುತ್ತಿದೆ ಹಾಗೂ ಜಮೀನು ಮಾರುವ ಪರಿಸ್ಥಿತಿ ಬರುತ್ತದೆ. ಕೃಷಿಕಾರ್ಮಿಕರ ಕೂಲಿಯಲ್ಲೂ ಏನೇನೂ ಹೆಚ್ಚಳವಾಗಿಲ್ಲ ಎನ್ನಬಹುದು. ದೊಡ್ಡ ಪ್ರಮಾಣದಲ್ಲಿ ಹರಿಜನರೇ ಇರುವ ಕೃಷಿಕಾರ್ಮಿಕರು ಕೂಲಿಹೆಚ್ಚಳಕ್ಕೆ ನಡೆಸಿರುವ ಹೋರಾಟದ ಫಲವಾಗಿ ಹರಿಜನರ ಸಜೀವ ದಹನ, ಸಾಮೂಹಿಕ ಕಗ್ಗೊಲೆಗಳಂತಹ ಘಟನೆಗಳು ಹೆಚ್ಚಿವೆ.

ಇವೆಲ್ಲವುಗಳಿಂದ ತಿಳಿದುಬರುವುದೇನೆಂದರೆ ಬಂಡವಾಳಶಾಹಿ-ಜಮೀನುದಾರಿ ಪಕ್ಷಗಳ ಕೃಷಿ ನೀತಿಯಿಂದ ಕ್ರಮಗಳಿಂದ ಆದ ಒಟ್ಟು ಪರಿಣಾಮ ಹೆಚ್ಚಿನ ಜಮೀನು ಹೊಂದಿರುವ ಕುಟುಂಬಗಳಲ್ಲಿ ಜಮೀನಿನ ಸ್ವಲ್ಪ ಪ್ರಮಾಣದ ಪುನಃ ಹಂಚಿಕೆ, ಒಂದು ಬಲಶಾಲಿ ಗುಂಪಾಗಿ ಶ್ರೀಮಂತ ರೈತರ ಉದಯ, ದೊಡ್ಡ ಪ್ರಮಾಣದಲ್ಲಿ ಮಧ್ಯಮ ಹಾಗೂ ಬಡರೈತರ ದಿವಾಳಿತನ ಮತ್ತು ಜಮೀನಿನಿಂದ ಉಚ್ಚಾಟನೆ, ಅಗಾಧ ಪ್ರಮಾಣದಲ್ಲಿ ಭೂಹೀನರ ಸಂಖ್ಯೆ ಏರಿಕೆ, ಕೃಷಿಕಾರ್ಮಿಕರ ಹದಗೆಡುತ್ತಿರುವ ಸ್ಥಿತಿ. ಬಂಡವಾಳಶಾಹಿ ಜಮೀನುದಾರಿ ಪಕ್ಷಗಳ 30 ವರ್ಷಗಳ ಈ ದಾಖಲೆಯನ್ನು ತೆಲಂಗಾಣಾ ಹೋರಾಟ 2 ವರ್ಷದಲ್ಲೇ ಈ ದಿಕ್ಕಿನಲ್ಲಿ ಮಾಡಿದ ಕಾರ್ಯವನ್ನು ಹೋಲಿಸಬಹುದು. ಇದರಿಂದ ಭಾರತದ ಬಂಡವಾಳಶಾಹಿ-ಜಮೀನುದಾರಿ ವರ್ಗಸಖ್ಯದ ಆಳು ವರ್ಗಗಳು ಕೃಷಿ ಸಂಬಂಧದಲ್ಲಿ ಬದಲಾವಣೆ ಬಯಸಿರಲಿಲ್ಲ, ಈಗಲೂ ಬಯಸುವುದಿಲ್ಲ ಎಂದೂ ಸ್ಪಷ್ಟಪಡುತ್ತದೆ. ಹಾಗೆಯೇ ಈ ಬದಲಾವಣೆಗಳನ್ನು ತರಲು ಇರುವ ಒಂದೇ ದಾರಿ ಎಂದರೆ ತೆಲಂಗಾಣಾ ದಾರಿ ಎಂದರೆ ಬಡ ಮತ್ತು ಮಧ್ಯಮ ರೈತರ ಮತ್ತು ಕೃಷಿಕಾರ್ಮಿಕರ ಜಂಟಿ ಹೋರಾಟದಿಂದಾಗುವ ಕೃಷಿಕ ಕ್ರಾಂತಿ (agrarian revolution) ಎಂಬುದೂ ಸ್ಪಷ್ಟವಾಗುತ್ತದೆ. ಈ ಹೋರಾಟಕ್ಕೆ ತೆಲಂಗಾಣಾ ಹೋರಾಟದ ಅನುಭವಗಳ ಸಫಲತೆ, ವಿಫಲತೆಗಳ ಮನನ ಅನಿವಾರ್ಯ.

ಭಾಷಾವಾರು ಪ್ರಾಂತ್ಯ ರಚನೆ

ತೆಲಂಗಾಣಾ ಚಳುವಳಿಯ ಇನ್ನೊಂದು ಸಾಧನೆಯೆಂದರೆ ನಮ್ಮ ದೇಶವನ್ನು ಭಾಷೆ, ಸಂಸ್ಕೃತಿ, ರಾಷ್ಟ್ರೀಯತೆ ಮುಂತಾದ ಪ್ರಜಾಸತ್ತಾತ್ಮಕ ವೈಜ್ಞಾನಿಕ ಆಧಾರದ ಮೇಲೆ ಪುನರ್ವಿಂಗಡಣೆಗೆ ಅದು ತಂದ ಬಲವಾದ ಒತ್ತಾಯ. ಚಳುವಳಿಯುದ್ದಕ್ಕೂ ಹೈದರಾಬಾದು ರಾಜ್ಯವನ್ನು ವಿಸರ್ಜಿಸಿ ತೆಲುಗು ಮಾತನಾಡುವ ಎಲ್ಲಾ ಪ್ರದೇಶಗಳನ್ನು ಸೇರಿಸಿ ಆಂಧ್ರಪ್ರದೇಶ ರಚಿಸಬೇಕು ಎಂಬ ಘೋಷಣೆಯಿತ್ತು. 1952ರಲ್ಲಿ ಪೊಟ್ಟಿ ರಾಮುಲುರವರು ಹುತಾತ್ಮರಾಗಿ ಆದ ಆಂಧ್ರಪ್ರದೇಶದ ಜನನಕ್ಕೆ ಕಾರಣವಾದ ಚಳುವಳಿ ಸಹ ತೆಲಂಗಾಣಾ ಚಳುವಳಿಯ ಮೇಲೆ ಆಧಾರಿತವಾದದ್ದು. ಆಂಧ್ರಪ್ರದೇಶದ ಜನನದಿಂದಾಗಿ ದೇಶದಾದ್ಯಂತ ಬ್ರಿಟೀಷರ ಮತ್ತು ನಂತರ ಬಂದ ಬಂಡವಾಳಶಾಹಿ-ಜಮೀನುದಾರ ವರ್ಗಗಳಿಗೆ ಒಡೆದು ಆಳಲು ಅನುಕೂಲಕರವಾಗಿದ್ದ ಅವೈಜ್ಞಾನಿಕವಾಗಿ ಮಾಡಿದ್ದ ವಿಂಗಡಣೆ ಹೋಗಿ ಭಾಷಾವಾರು ಪ್ರಾಂತ್ಯಗಳ ರಚನೆಯಾಯಿತು. ಇದು ದೇಶದ ಬೇರೆ ಬೇರೆ ರಾಷ್ಟ್ರೀಯತೆಗಳ ಜನರ ಬಹಳ ಸಮಯದ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳ ವಿಜಯ ಹಾಗೂ ದೇಶದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯ ದೊಡ್ಡ ಸಾಧನೆ.

ಕಮ್ಯುನಿಸ್ಟ್ ಚಳುವಳಿಗೆ ಕೊಡುಗೆ

ತೆಲಂಗಾಣಾ ಚಳುವಳಿ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಗೆ ಕೊಟ್ಟ ಅತಿ ದೊಡ್ಡ ಕೊಡುಗೆ ಎಲ್ಲಕ್ಕಿಂತ ಹೆಚ್ಚಿನ ಮಹತ್ವದ್ದು. ಈ ಚಳುವಳಿ ಭಾರತದ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಯ (People's democratic revolution) ರಣನೀತಿ ಮತ್ತು ತಂತ್ರಗಳಿಗೆ (strategy and tactics) ಸಂಬಂಧಿಸಿರುವ ಎಲ್ಲಾ ಮೂಲಭೂತ ತಾತ್ವಿಕ ಮತ್ತು ಸೈದ್ಧಾಂತಿಕ ಸವಾಲುಗಳನ್ನು ಮುಂದೊಡ್ಡಿತಲ್ಲದೆ ಅವುಗಳ ಸಮಂಜಸವಾದ ಮತ್ತು ವೈಜ್ಞಾನಿಕವಾದ ಉತ್ತರಗಳನ್ನೂ, ನೈಜವಾದ ಮತ್ತು ಕ್ರಿಯಾತ್ಮಕ ಪರಿಹಾರಗಳನ್ನು ಕಂಡುಕೊಳ್ಳುವಲ್ಲೂ ಸಹಾಯಕವಾಯಿತು. ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಯಲ್ಲಿ ರೈತವರ್ಗದ ಪಾತ್ರ, ಗ್ರಾಮೀಣ ಕ್ರಾಂತಿಕಾರಿ ತಳಪಾಯಗಳು (bases) ಮತ್ತು ಗೆರಿಲ್ಲಾ ಹೋರಾಟ, ರೈತವರ್ಗದ ವಿಂಗಡಣೆ (defferentiation)ಯ ಮೂರ್ತ ಅಧ್ಯಯನ, ಕ್ರಾಂತಿಯಲ್ಲಿ ಈ ರೈತ ವಿಭಾಗಗಳ ವಿಶಿಷ್ಟ ಪಾತ್ರ, ಭಾರತದಂತಹ ಆರ್ಥಿಕವಾಗಿ ಹಿಂದುಳಿದ ದೇಶಗಳಲ್ಲಿ ಕಾರ್ಮಿಕವರ್ಗದ ಅಧಿಪತ್ಯ (hegemony) ಪರಿಕಲ್ಪನೆಯ ನಿಖರವಾದ ಅರ್ಥ ಮತ್ತು ಪ್ರಾಮುಖ್ಯತೆ, ಭಾರತದ ಕ್ರಾಂತಿಯ ಸ್ಥೂಲ ಮುನ್ನೋಟ ಇವೇ ಮುಂತಾದವು ಅದು ಮುಂದೊಡ್ಡಿದ ಸವಾಲುಗಳು. ಇವುಗಳ ಮೇಲೆ ಪಕ್ಷದೊಳಗೆ ಗಹನವಾದ ಗಂಭೀರವಾದ ಚರ್ಚೆಗಳು ನಡೆದವು. ಇದು ಕಮ್ಯುನಿಸ್ಟ್ ಚಳುವಳಿ ತನ್ನನ್ನು ನಿರ್ವಚಿಸಿಕೊಳ್ಳುವಲ್ಲಿನ ಬಹಳ ಪ್ರಮುಖ ಘಟ್ಟ.

ಭಿನ್ನಾಭಿಪ್ರಾಯಗಳು

ಈ ಹೋರಾಟದಲ್ಲಿ ಅದರಲ್ಲೂ ಕೊನೆಯ ಎರಡು ವರ್ಷಗಳಲ್ಲಿ ಕಮ್ಯುನಿಸ್ಟ್ ಪಕ್ಷದಲ್ಲಿ ಈ ಚಳುವಳಿಯ ಬಗ್ಗೆ ಎರಡು ಪರಸ್ಪರ ವಿರುದ್ಧವಾದ ವಿಚಾರಧಾರೆಗಳಿದ್ದವು ಎಂದು ಇಲ್ಲಿ ಹೇಳಲೇಬೇಕು. ಒಂದು ಚಳುವಳಿಯನ್ನು ಅದರ ಸಾಧನೆಗಳನ್ನು ಸಮರ್ಥಿಸಿತು. ಇನ್ನೊಂದು ಅದನ್ನು ವ್ಯಕ್ತಿ ಮತ್ತು ಗುಂಪು ಭಯೋತ್ಪಾದಕತನ (individual and squad terrorism), ಪಂಥವಾದ (sectarian) ಎಂದು ಮೂದಲಿಸಿತಲ್ಲದೆ ಚಳುವಳಿಗೆ ಸಕ್ರಿಯ ದ್ರೋಹ ಸಹ ಬಗೆಯಿತು. ಮುಂದೆ 1964ರಲ್ಲಿ ಕಮ್ಯುನಿಸ್ಟ್ ಚಳುವಳಿ ಇಬ್ಭಾಗವಾದಾಗ ಎರಡನೆಯ ವಿಚಾರಧಾರೆಯವರು ಬಲ ಕಮ್ಯುನಿಸ್ಟ್ ಪಕ್ಷ ಸೇರಿದ್ದು ಮತ್ತು ಮೊದಲನೆಯವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸೇರಿದ್ದು ಆಕಸ್ಮಿಕವೇನಲ್ಲ. ತೆಲಂಗಾಣಾ ಚಳುವಳಿಯ ಬಗೆಗಿನ ಭಿನ್ನಾಭಿಪ್ರಾಯಕ್ಕೂ ಕಮ್ಯುನಿಸ್ಟ್ ಚಳುವಳಿ ಇಬ್ಭಾಗವಾದದ್ದಕ್ಕೂ ನೇರವಾದ, ಗಾಢ ಸಂಬಂಧವಿದೆ.

ಬಲಕಮ್ಯುನಿಸ್ಟ್ ನಾಯಕರು ಈಗಲೂ ತೆಲಂಗಾಣಾ ಚಳುವಳಿಯನ್ನು ಅತಿ ಎಡಪಂಥೀಯತೆ (ultra-leftism) ಎಡ ದುಸ್ಸಾಹಸ (left adventurism) ಮತ್ತು ಅಂಧ ಸಿದ್ಧಾಂತವಾದ (dogmatism) ಎಂದು ದೂಷಿಸುತ್ತಾರೆ. ಭಾರತದ ಪ್ರಭುತ್ವ (state) ಬಂಡವಾಳಶಾಹಿ ಪ್ರಭುತ್ವ ಮತ್ತು ಆಳುವ ವರ್ಗ ಪ್ರಗತಿಪರ ರಾಷ್ಟ್ರೀಯ ಬಂಡವಾಳಶಾಹಿ ವರ್ಗ, ಜಮೀನುದಾರಿ-ವಿರೋಧಿ ಎನ್ನುವ ಅವರ ಸಿದ್ಧಾಂತಕ್ಕೂ ತೆಲಂಗಾಣಾ ಚಳುವಳಿಯನ್ನು "ಜಮೀನುದಾರಿ ವಿರೋಧಿ" ಕಾಂಗ್ರೆಸ್ಸು ದಮನ ಮಾಡಿದ ರೀತಿ ಮತ್ತು 30 ವರ್ಷಗಳಲ್ಲಿ "ಜಮೀನುದಾರಿ-ವಿರೋಧಿ" ದಾಖಲೆಗೂ ತಾಳಮೇಳವೇ ಇಲ್ಲ. ಇವೆರಡನ್ನು ಭಾರತೀಯ ಪ್ರಭುತ್ವ (state) ಜಮೀನುದಾರಿ-ಬಂಡವಾಳಶಾಹಿ ವರ್ಗಸಖ್ಯದ ಆಧಾರದ ಮೇಲಿರುವ ಪ್ರಭುತ್ವ ಎಂದು ನಿರ್ವಚಿಸುವುದರಿಂದ ಮಾತ್ರವೇ ವಿವರಿಸಲು ಸಾಧ್ಯ. ಇದನ್ನು ಒಪ್ಪದಿದ್ದಾಗ ಮತ್ತು ಆ ಚಳುವಳಿಗೆ ಮಾಡಿದ ಘಾತಕವನ್ನು ಮುಚ್ಚಿಕೊಳ್ಳಲು ಆ ಚಳುವಳಿಯನ್ನೇ ದೂಷಿಸುವುದು ಇರುವ ಒಂದೇ ದಾರಿ.

ಈಗಿನ ಬಲಕಮ್ಯುನಿಸ್ಟ್ ನಾಯಕರನೇಕರು ಚಳುವಳಿಯ ಎರಡನೆಯ ಹಂತದಲ್ಲಿ ಹೆಚ್ಚುವರಿ ಜಮೀನು ವಿತರಣೆ ಇತ್ಯಾದಿ ಕ್ರಮಗಳನ್ನು ವಿರೋಧಿಸಿದ್ದರು. ವಿಶಾಲಾಂಧ್ರ ಪ್ರಾಂತ್ಯ ಸಮಿತಿ ಮತ್ತು ಕೇಂದ್ರ ಸಮಿತಿಯಲ್ಲಿದ್ದ ಈ ತೆಲಂಗಾಣಾ-ಚಳುವಳಿ-ವಿರೋಧಿ ಗುಂಪು ಮೊದಲ ಹಂತಗಳಲ್ಲಿ ಪೂರ್ಣವಾಗಿ ಚಳುವಳಿಯಲ್ಲಿ ಭಾಗವಹಿಸಿದ್ದರೂ ಕೊನೆಯ ಹಂತದಲ್ಲಿ ಅದರಲ್ಲೂ ಭಾರತದ ಸೈನ್ಯಗಳು ಹೈದರಾಬಾದಿಗೆ ಪ್ರವೇಶಿಸಿ ದಮನ ಆರಂಭಮಾಡಿದಾಗ ಅದು "ರಕ್ಷಕ ಸೈನ್ಯ" ಮತ್ತು "ಪೋಲೀಸು ಕಾರ್ಯಾಚರಣೆ ಹೈದರಾಬಾದಿನ ಜನತೆಯ ವಿಮುಕ್ತಿ" ಎನ್ನುತ್ತಾ ಚಳುವಳಿಯನ್ನು ತ್ಯಜಿಸಿ ಬಗೆದ ಸಕ್ರಿಯ ದ್ರೋಹ; ಕೇಂದ್ರ ನಾಯಕತ್ವದಲ್ಲಿದ್ದ ಡಾಂಗೆ ಮತ್ತು ಇತರರ ಈ ಗುಂಪು ಸಹ ರಾಷ್ಟ್ರೀಯ ಮಟ್ಟದಲ್ಲಿ ಇದೇ ವಿಚಾರಗಳನ್ನು ಬಹಿರಂಗವಾಗಿ ಹೇಳುವ ಮೂಲಕ ನೆಹರೂ ಸರಕಾರದ ಅಪಪ್ರಚಾರಕ್ಕೆ (ಅ) ಪ್ರತ್ಯಕ್ಷ ಸಹಾಯ ನೀಡಿದ್ದು; ಇವೆಲ್ಲಾ ಪಾಳೆಯಗಾರಿ-ವಿರೋಧಿ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಈ ಉಜ್ವಲ ರೋಮಾಂಚಕಾರಿ ಅಧ್ಯಾಯದ ವಿಷಾದಕರ ಪುಟಗಳು.

ಇದರರ್ಥ ತೆಲಂಗಾಣಾ ಚಳುವಳಿಯ ನಾಯಕತ್ವವಾಗಲಿ, ಆಗಿನ ಕೇಂದ್ರ ನಾಯಕತ್ವವಾಗಲಿ ಯಾವುದೇ ತಪ್ಪು ಮಾಡಲಿಲ್ಲವೆಂದಲ್ಲ. ಸಂಕೀರ್ಣ ಸಮಸ್ಯೆಗಳನ್ನೊಡ್ಡಿದ್ದ ಈ ಚಳುವಳಿಯ ನಿರ್ವಹಣೆಯಲ್ಲಿ ತಪ್ಪುಗಳಾದದ್ದು ಬಹುಶಃ ಸ್ವಾಭಾವಿಕ.

ಚಳುವಳಿಯ ತಾತ್ವಿಕ ವಿಶ್ಲೇಷಣೆ

ತೆಲಂಗಾಣಾ ಚಳುವಳಿ ರೈತರ ಆಂಶಿಕ ಆರ್ಥಿಕ ಬೇಡಿಕೆಗಳ ಮೇಲೆ ಆಧರಿಸಿದ ಸಶಸ್ತ್ರ ಹೋರಾಟವಾಗಿ ಆರಂಭವಾಗಿ, ಬೆಳೆಯುತ್ತಾ ನಿಜಾಮನ ದುರಾಡಳಿತವನ್ನು ಕೊನೆಗಾಣಿಸುವ ಪ್ರಜಾಸತ್ತಾತ್ಮಕ ಪಾಳೆಯಗಾರಿ-ವಿರೋಧಿ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ವಿಮುಕ್ತಿ ಹೋರಾಟದ ಸ್ವರೂಪ ಪಡೆಯಿತು. ನಿಜಾಮನ ಆಡಳಿತವಿರುವವರೆಗೆ ಚಳುವಳಿ ಸ್ಥೂಲವಾಗಿ ಸರಿಯಾದ ಹಾದಿಯಲ್ಲೇ ನಡೆದಿತ್ತು. ಆದರೆ ನಿಜಾಮನ ಆಡಳಿತ ಕೊನೆಗೊಂಡು, ಭಾರತದ ಸೈನ್ಯಗಳು ಪ್ರವೇಶಿಸಿದ ನಂತರವೂ ಅವುಗಳ ವಿರುದ್ಧ "ವಿಮುಕ್ತಿ ಹೋರಾಟದ" ಘೋಷಣೆಯಲ್ಲೇ ಸಶಸ್ತ್ರ ಹೋರಾಟ ಮುಂದುವರೆಸಿದ್ದು ತಪ್ಪು ನೀತಿ. ಭಾರತದ ಸೈನ್ಯಗಳ ವಿರುದ್ಧ ತೆಲಂಗಾಣಾ ರೈತರು ತಮ್ಮ ಸತತ ಹೋರಾಟದ ಫಲಗಳಾದ ಕೃಷಿಕಕ್ರಾಂತಿ ಮತ್ತು ಇತರ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯಗಳು ಹಾಗೂ ಹಕ್ಕುಗಳ ರಕ್ಷಣೆಗಾಗಿ ಹೋರಾಟ ಮುಂದುವರೆಸಿದ್ದು ಸರಿಯಾದ ನೀತಿಯೇ. ಆದರೆ ಈ ಹೋರಾಟವನ್ನು ಭಾರತದಲ್ಲೇ, ಪ್ರಜಾಸತ್ತಾತ್ಮಕ ಕ್ರಾಂತಿಗೆ ಹೋರಾಟದ ಮೊದಲಘಟ್ಟದ ವಿಮುಕ್ತಿ ಹೋರಾಟವೆಂದು ನಿರ್ವಚಿಸಿದ್ದು ತಪ್ಪು ನೀತಿ. ಆಗಿನ ದೇಶದ ರಾಜಕೀಯ ಪರಿಸ್ಥಿತಿ, ಬೇರೆ ಬೇರೆ ವರ್ಗ ಶಕ್ತಿಗಳ ಪರಸ್ಪರ ಸಂಬಂಧ (correlation of class forces) ಇದಕ್ಕೆ ಪೂರಕವಾಗಿರಲಿಲ್ಲ. ಹೈದರಾಬಾದಿನ ಆಂತರಿಕ ರಾಜಕೀಯ ಪರಿಸ್ಥಿತಿಯಲ್ಲೂ, ಅದು ಭಾರತ ಒಕ್ಕೂಟಕ್ಕೆ ಸೇರಿದ ನಂತರ ಪ್ರಮುಖ ಬದಲಾವಣೆಗಳಾಗಿದ್ದವು. ರೈತವರ್ಗದ ಮಿತ್ರವರ್ಗಗಳಾಗಿದ್ದ ದೊಡ್ಡ ರೈತರ ವರ್ಗ ಮತ್ತು ಬೇರೆ ಪ್ರಜಾಸತ್ತಾತ್ಮಕ ಶಕ್ತಿಗಳು ಒಕ್ಕೂಟಕ್ಕೆ ಸೇರಿದ ನಂತರ ಚಳುವಳಿಗೆ ಬೆಂಬಲಿಸಲಿಲ್ಲ. ಬ್ರಿಟೀಷರ ನೇರ ಆಡಳಿತದಲ್ಲಿದ್ದ ಪ್ರದೇಶಗಳಲ್ಲಿ ನೆಹರೂ ಸರ್ಕಾರದಿಂದ ಪ್ರಜಾಸತ್ತಾತ್ಮಕ ಮತ್ತು ನ್ಯಾಯವಾದ ಆಳ್ವಿಕೆಯ ವಿಶೇಷ ನಿರೀಕ್ಷೆ. ತೆಲಂಗಾಣಾ ಹೋರಾಟಕ್ಕೆ ಬೆಂಬಲವಾಗಿ ಭಾರತದ ಕಾರ್ಮಿಕ ವರ್ಗದ ಮಹಾಮುಷ್ಕರ ಸಫಲವಾಗದೆ ಹೋದದ್ದು, ಭಾರತದ ಸರಕಾರದ ವಿರುದ್ಧ ತಪ್ಪು ಘೋಷಣೆಯೊಂದಿಗೆ ಹೋರಾಡಿದ್ದರಿಂದ ಕೆಲವು ಪ್ರಜಾಸತ್ತಾತ್ಮಕ ಶಕ್ತಿಗಳ ಬೆಂಬಲಸಿಗದೆ ಹೋದದ್ದು ಇತ್ಯಾದಿ ಕಾರಣಗಳಿಂದ ತೆಲಂಗಾಣಾ ಹೋರಾಟವನ್ನು ಭಾರತ ಸರಕಾರದ ವಿರುದ್ಧ ವಿಮುಕ್ತಿ ಹೋರಾಟವಾಗಿ ಮುಂದುವರಿಯುವುದು ಸಾಧ್ಯವಿರಲಿಲ್ಲ. ಅದೇ ಸಮಯದಲ್ಲಿ ಮೇಲೆ ಹೇಳಿದ ತಪ್ಪು ನೀತಿಯಿಂದ ಮತ್ತು ಬಲಪಂಥೀಯರ ದ್ರೋಹದಿಂದಾಗಿ ಭಾರತದ ಸೈನ್ಯಗಳ ವಿರುದ್ಧ ತೆಲಂಗಾಣಾ ರೈತರ ಭೂಮಿ ಮತ್ತು ಇತರ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯಗಳ ರಕ್ಷಣೆಗೆ ಮಾತ್ರ ಆಂಶಿಕ ಸಶಸ್ತ್ರ ಹೋರಾಟ ಮುಂದುವರೆಸುವುದೂ, ಅದಕ್ಕೆ ರಾಷ್ಟ್ರಾದ್ಯಂತ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳ ಬೆಂಬಲ ಪಡೆಯುವುದು ಹಾಗೂ ಸಶಸ್ತ್ರ ಹೋರಾಟ ಮುಂದುವರಿಸುತ್ತಲೇ, ಚಳುವಳಿ ಮತ್ತು ಕಾರ್ಯಕರ್ತರ ರಕ್ಷಣೆ ಜತೆ ತಾತ್ಕಾಲಿಕ ಚಳುವಳಿಯ ಹಿಂತೆಗೆಯಲು ಭಾರತದ ಸರಕಾರದಿಂದ ಪರಮಾವಧಿ ರಿಯಾಯತಿಗಳನ್ನು ಸಂಪಾದಿಸಿ ಚಳುವಳಿ ಇನ್ನೂ ಮೇಲಿನ ಹಂತಗಳಿಗೆ ಹೋಗಲು ಬೇಕಾದ ಪರಿಸ್ಥಿತಿ

(7ನೇ ಪುಟ ನೋಡಿ)

ತೆಲಂಗಾಣಾ ರೈತರ ಚಾರಿತ್ರಿಕ.......

[6ನೇ ಪುಟದಿಂದ]

ನಿರ್ಮಾಣ ಮಾಡುವುದು ಸಾಧ್ಯವಾಗದೇ ಹೋಯಿತು. ಇದು ತೆಲಂಗಾಣಾ ಹೋರಾಟದ ಟೀಕಾತ್ಮಕ ವಿಶ್ಲೇಷಣೆ.

ಇನ್ನೊಂದು ಟೀಕೆ

ಕಳೆದ ಒಂದು ದಶಕದಿಂದ ತೆಲಂಗಾಣಾ ಚಳುವಳಿಯ ಸಾಧನೆಗಳನ್ನು ನಾಯಕತ್ವವನ್ನು ಇನ್ನೊಂದು ದೃಷ್ಟಿಕೋಣದಿಂದ ಟೀಕಿಸುವ ವಾದ ಕೇಳಿ ಬರುತ್ತಿದೆ. ಇದು ಮುಖ್ಯವಾಗಿ ನಕ್ಸಲೀಯರೆಂದು ಹೆಸರಾದ ಗುಂಪುಗಳಿಂದ ಬರುತ್ತಿದೆ. ಇದರ ಪ್ರಕಾರ 1951ರಲ್ಲಿ ಸಶಸ್ತ್ರ ಹೋರಾಟವನ್ನು ನಿಲ್ಲಿಸುವ ನಿರ್ಧಾರ ಪಕ್ಷ ಭಾರತದ ಜನಸಾಮಾನ್ಯರಿಗೆ ಬಗೆದ ದೊಡ್ಡ "ದ್ರೋಹ" ಹಾಗೂ ಪ್ರಮಾದ. 1951ರ ನಂತರವೂ ಭಾರತದ ಸೈನ್ಯಗಳ ವಿರುದ್ಧ ವಿಮುಕ್ತಿ ಹೋರಾಟ ಮುಂದುವರಿಸಿದ್ದರೆ "ವಿಮುಕ್ತಿ ಪ್ರದೇಶ"ಗಳು "ವಿಮುಕ್ತಿ ಸೈನ್ಯ" ಇತ್ಯಾದಿ ನಿರ್ಮಾಣವಾಗಿ ಭಾರತದ ಪ್ರಜಾಸತ್ತಾತ್ಮಕ, ಜನತಾಂತ್ರಿಕ ಕ್ರಾಂತಿ ಸಫಲವಾಗುತ್ತಿತ್ತು ಎಂದು ಇವರ ವಾದ. ಇಲ್ಲಿ ಡಿ. ವೆಂಕಟೇಶ್ವರರಾವ್ ಮುಂತಾವರದ ಈ ವಾದ ಪ್ರತಿಪಾದಿಸುವ ನಾಯಕರು ಹೋರಾಟ ನಿಲ್ಲಿಸುವ ನಿರ್ಣಯ.ದಲ್ಲಿ ಪಾಲುಗೊಂಡವರೇ ಎಂಬುದು ಗಮನಾರ್ಹ.

ಈ ವಾದ ಮಾಡುವವರು ಒಂದು ವಿಶಿಷ್ಟ ರೂಪದ ಹೋರಾಟ ನಡೆಸಲು ಜನ ಸಾಮಾನ್ಯರು, ಅವರ ರಾಜಕೀಯ ಪ್ರಜ್ಞೆಯ ಮಟ್ಟ, ಸಂಘಟನೆಯ ಮಟ್ಟ, ಹಾಗೂ ಆವಿಶಿಷ್ಟ ರೂಪದಲ್ಲಿ ಹೋರಾಟ ಮಾಡಲು ಮುಂದುವರೆಸಲು ಜನರ ಸನ್ನದ್ಧತೆ ಇವೆಲ್ಲವೂ ನಿರ್ಣಾಯಕ ಅಂಶಗಳು ಎಂದು ಮರೆಯುತ್ತಾರೆ. ಚೀನಾದ ಕ್ರಾಂತಿಯ ರಣನೀತಿ ಮತ್ತು ತಾತ್ರಗಳ ಯಾಂತ್ರಿಕ ಅನ್ವಯ; ವಿಮುಕ್ತಿ ಹೋರಾಟಕ್ಕೆ ಗೆರಿಲ್ಲಾ ಸ್ಕ್ವಾಡ್, ಬಂದೂಕ, ಗುರಿಯಾದ ವರ್ಗಶತ್ರು ಎಂಬ ಸಂಕುಚಿತ ದೃಷ್ಟಿಯ ಅರ್ಥ ನೀಡುವುದು; ಆಂಶಿಕ (partisan struggle) ಮತ್ತು ಪೂರ್ಣಪ್ರಮಾಣದ ವಿಮುಕ್ತಿ ಹೋರಾಟದ ವ್ಯತ್ಯಾಸಗಳು, ಭಾರತದಲ್ಲಿ ಇವೆರಡನ್ನು ಅನ್ವಯಿಸಬೇಕಾದ ವಿಶಿಷ್ಟ ಪರಿಸ್ಥಿತಿಗಳ ತಿಳುವಳಿಕೆ, ವ್ಯಕ್ತಿ ಭಯೋತ್ಪಾದನೆ ಮತ್ತು ಆಂಶಿಕ ಹೋರಾಟಕ್ಕೆ ಇರುವ ವ್ಯತ್ಯಾಸದ ತಿಳುವಳಿಕೆ, ಇವುಗಳ ಅಭಾವ : ಈ ವಾದದ ಮುಖ್ಯ ತಪ್ಪುಗಳು. ನಕ್ಸಲ್ ಬಾರಿ ಮತ್ತು ಶ್ರೀಕಾಕುಳಂನಂತಹ ಕಡೆಗಳಲ್ಲಿ ಈ ನಕ್ಸಲೀಯ ನಾಯಕರು ಪ್ರಾರಂಭಿಸಲು ಪ್ರಯತ್ನಿಸಿದ ಪೂರ್ಣ ವಿಮುಕ್ತಿ ಹೋರಾಟಗಳ ವಿಫಲತೆ ಹಾಗೂ ಕಳೆದ 10 ವರ್ಷಗಳಲ್ಲಿ ನಕ್ಸಲೀಯ ಚಳುವಳಿಯ ನೀತಿಯ ಪೂರ್ಣ ದಿವಾಳಿಕೋರತನ ಈ ವಿಚಾರಧಾರೆ ಎಷ್ಟು ತಪ್ಪಾದದ್ದು ಎಂದು ಸಿದ್ಧಪಡಿಸಿದೆ.

ಭಾರತ ಈಗ ಪುನಃ ಇನ್ನೊಂದು ರಾಜಕೀಯವಾಗಿ ನಿರ್ಣಾಯಕ ಘಟ್ಟದ ಹೊಸ್ತಿಲಲ್ಲಿ ನಿಂತಿದೆ. ತೆಲಂಗಾಣಾ ಹೋರಾಟದ ಕಾಲದ ಮತ್ತು ಈಗಿನ ಕೃಷಿ ಸಂಬಂಧಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿದ್ದರೂ ಬೇರೆ ಬೇರೆ ರೂಪದ ತರಹುವಾರಿ ಜಮೀನುದಾರ ಮತ್ತು ಸರ್ವಸಾಮಾನ್ಯ ರೈತವರ್ಗದ ಮಧ್ಯದ ವೈರುಧ್ಯ ಉತ್ಕಟವಾಗುತ್ತಿದೆ. ಕೃಷಿ ಸಂಬಂಧದ ಈ ಮುಖ್ಯ ವೈರುಧ್ಯ ಇತರ ವೈರುಧ್ಯಗಳ ಬಗ್ಗೆ ನಿಖರವಾದ ಅಧ್ಯಯನ ನಡೆಸಬೇಕಾಗಿದೆ. ಕೃಷಿಕ ಕ್ರಾಂತಿ ಭಾರತದ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಯ ಬೆನ್ನೆಲುಬು ಎಂಬ ಘೋಷಣೆಯನ್ನು ಈಗಿನ ಪರಿಸ್ಥಿತಿಯಲ್ಲಿ ಕಾರ್ಯಗತಗೊಳಿಸಲು ಹೊಸ ಕ್ರಮಗಳನ್ನು, ರೀತಿಗಳನ್ನು ಕಂಡುಹಿಡಿಯುವುದು ಕಮ್ಯುನಿಸ್ಟರ ಕರ್ತವ್ಯ. ಕೃಷಿಕ ಕ್ರಾಂತಿಗೆ ಹೋರಾಟ ನಡೆಸುವ ರೈತರಿಗೂ, ಕಾರ್ಮಿಕ ವರ್ಗಕ್ಕೂ ಕ್ರಾಂತಿಕಾರಿ ವರ್ಗಸಖ್ಯ ಏರ್ಪಡಿಸುವುದು ಇನ್ನೊಂದು ಗಮನದಲ್ಲಿಡಬೇಕಾದ ವಿಷಯ.

ಈ ಕಾರ್ಯದಲ್ಲಿ ತೆಲಂಗಾಣಾ ಸಶಸ್ತ್ರ ಹೋರಾಟದ ಸಫಲತೆಗಳು, ವೈಫಲ್ಯಗಳು ಮಾರ್ಗದರ್ಶಕವಾಗಲಿ. ತೆಲಂಗಾಣಾ ಹೋರಾಟದ ಸಾವಿರಾರು ಹುತಾತ್ಮರ ಉಜ್ವಲ ಕ್ರಾಂತಿಕಾರಿ ಆದರ್ಶ ಸ್ಫೂರ್ತಿಯ ಚಿಲುಮೆಯಾಗಲಿ.

ದ್ರಾಕ್ಷಿ ಬೆಳೆಗಾರರ ಹೋರಾಟ

ತಾ. 11.6.79 ರಿಂದ ಬೆಂಗಳೂರು ದ್ರಾಕ್ಷಿ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘದ ಮೈಸೂರು ಶಾಖೆಯ ಕೆಲಸಗಾರರು ತಮ್ಮ ಬೇಡಿಕೆಗಳಾದ ಕೆಲಸದ ಭದ್ರತೆ, ಹೆಚ್ಚಿನ ವೇತನ, ಬೋನಸ್ಸು ಇತ್ಯಾದಿಗಳಿಗಾಗಿ ಕಾನೂನುಬದ್ಧವಾಗಿ ಮುಷ್ಕರವನ್ನು ನಡೆಸುತ್ತಿದ್ದಾರೆ. ಮೇಲಿನ ಸಹಕಾರ ಸಂಘದ ನಿರ್ದೇಶನ ಮಂಡಲಿಯವರು ಮತ್ತು ತೋಟಗಾರಿಕೆ ಇಲಾಖೆಯ ಉನ್ನತ ಅಧಿಕಾರಿಗಳೂ ಅಸಡ್ಡೆಯಿಂದ ಇದ್ದಾರೆ ತಾ.24.6.79 ರಂದು ತೋಟಗಾರಿಕೆ ಇಲಾಖೆಯ ಡೆಪ್ಯೂಟಿ ಡೈರೆಕ್ಟರ್‌ರವರು ಮುಷ್ಕರಗಾರರನ್ನು ಕರೆಸಿ ನಿಮ್ಮ ಬೇಡಿಕೆಗಳನ್ನು ಈಡೇರಿಸಲು ತಗಲುವ ಹೆಚ್ಚಿಗೆ ಖರ್ಚನ್ನು ನೀವು ವ್ಯಾಪಾರದ ಲಾಭದಿಂದ ಮಾಡಿಕೊಡುವುದಾದರೆ ನಿಮ್ಮ ಬೇಡಿಕೆಗಳನ್ನು ಈಡೇರಿಸುತ್ತೇವೆಂದು ನ್ಯಾಯ ಸಮ್ಮತವಲ್ಲದ ಸಲಹೆಗೆ ಒಪ್ಪದ ಕಾರಣ ಮುಷ್ಕರವನ್ನು ಮುಂದುವರಿಸಲಾಗುತ್ತಿದೆ. ತಾ. 27. 6. 79 ರಿಂದ ಈ ಮುಷ್ಕರದ ಜೊತೆಗೆ ಕೆಲಸಗಾರರಲ್ಲಿ ಒಬ್ಬರಾದ ಶ್ರೀ ಎಲ್. ಕೆಂಪಯ್ಯನವರು ಅನಿರ್ದಿಷ್ಟಕಾಲ ಉಪವಾಸ ಮುಷ್ಕರವನ್ನು ಕೈಗೊಳ್ಳುವ ತೀರ್ಮಾನ ಮಾಡಲಾಗಿದೆ.

ಆರ್ಥಿಕ ಸಮೀಕ್ಷೆ :

[3ನೇ ಪುಟದಿಂದ]

3.8 ಮತ್ತು ಪರಿಶಿಷ್ಟ ಜಾತಿಯವರದ್ದು ಶೇ. 2.0) 1974-75 ರಲ್ಲಿ ಗ್ರಾಮೀಣ ಕಾರ್ಮಿಕರ ಸಾಲದ ಹೊರೆಯಲ್ಲಿ ಶೇ. 48 ರಷ್ಟು ದಿನಬಳಕೆಗಾಗಿದೆ, ಶೇ. 12.7ರಷ್ಟು ಉತ್ಪಾದನಾ ಉದ್ದೇಶಗಳಿಗಾಗಿದೆ ಮತ್ತು ಶೇ. 14.6 ರಷ್ಟು ವಿವಿಧ ಉದ್ದೇಶಗಳಿಗಾಗಿದೆ.

ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ಗ್ರಾಮೀಣ ಕಾರ್ಮಿಕರಿಗೆ ಸಾಲ ನೀಡಲು ಇನ್ನೂ ಮುಂದೆ ಬರುತ್ತಿಲ್ಲ. ಅವರಿಗೆ ನೀಡುವ ಸಾಲಗಳು ಉತ್ಪಾದನೆಗೆ ವಿನಿಯೋಗವಾಗದೆ ದಿನಬಳಕೆಗೆ ಮತ್ತು ಇತರ ಉದ್ದೇಶಗಳಿಗೆ ವಿನಿಯೋಗವಾಗುವುದೆಂದು ಒಂದು ನೆಪ. ಆದರೆ, ಸಣ್ಣ ಭೂಹಿಡುವಳಿಯ ಗ್ರಾಮೀಣ ಕಾರ್ಮಿಕರಿಗೆ ವ್ಯವಸಾಯಕ್ಕೆ ಸಾಕಷ್ಟು ಸಾಲ ಸವಲತ್ತುಗಳನ್ನು ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ನೀಡದಿದ್ದರೆ, ಅವರು ಅನಿವಾರ್ಯವಾಗಿ ದುಬಾರಿ ಬಡ್ಡಿಯಲ್ಲಿ ಸಾಲ ನೀಡುವ ಹಣಗಾರರಿಗೇ ಮೊರೆ ಹೋಗಬೇಕಾಗುವುದು. ಆಗ ಅವರ ವ್ಯವಸಾಯವು ಕೆಟ್ಟು, ಉತ್ಪಾದನೆ, ಆದಾಯ, ಗ್ರಾಹಕಶಕ್ತಿಗಳು ಕ್ಷಯಿಸುವುವು. ಕಾರಣ, ದಿನಬಳಕೆಗಾಗಿ ಇನ್ನಷ್ಟು ಸಾಲಮಾಡಬೇಕಾಗುವುದು; ಪುನಃ ಅವರು ಹಣಗಾರರ ಬಲೆಗೇ ಬೀಳಬೇಕಾಗುವುದು. ಕ್ರಮೇಣ ಇವರು ಸಾಲದ ಹೊರೆಯಿಂದ ವ್ಯವಸಾಯ ಬಿಟ್ಟು ಕೃಷಿಕಾರ್ಮಿಕರ ಸೈನ್ಯಕ್ಕೇ ಸೇರ್ಪಡೆಗೊಳ್ಳುವರು. ಸಣ್ಣ ಹಿಡುವಳಿಯಿರುವ ಗ್ರಾಮೀಣ ಬಡರೈತರ ವಿಷಯದಲ್ಲಿ ಸಾಲ ನೀಡುವಾಗ ದಿನಬಳಕೆಯ ಮತ್ತು ಉತ್ಪಾದನೆಯ ಉದ್ದೇಶಗಳನ್ನು ಪ್ರತ್ಯೇಕಿಸುವುದು ಅರ್ಥಹೀನ. ಅವುಗಳು ಒಂದಕ್ಕೊಂದು ಪರಸ್ಪರ ನಿಕಟ ಸಂಬಂಧ ಹೊಂದಿವೆ.

ಭೂಮಾಲಕರು ಮತ್ತು ಶ್ರೀಮಂತ ರೈತರು ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳಿಂದ ಮತ್ತು ಇತರ ಮೂಲಗಳಿಂದ ಧಾರಾಳವಾಗಿ ಸಾಲ ಸವಲತ್ತುಗಳನ್ನು ಪಡೆದುದನ್ನು ಉತ್ಪಾದನೆಗೇ ಉಪಯೋಗಿಸುವರೆಂಬ ಭರವಸೆ ಇದೆಯೇ ? ಇಲ್ಲ. ಅಂತಹ ಸಂಪನ್ಮೂಲಗಳನ್ನು ಅವರು ದುಬಾರಿ ಬಡ್ಡಿಗೆ ಬಡಜನರಿಗೆ ಸಾಲಕೊಟ್ಟು ವ್ಯವಸಾಯಕ್ಕಿಂತ ಹೆಚ್ಚಿನ ಲಾಭ ಗಳಿಸಬಹುದಾಗಿದೆ. ಅಲ್ಲದೆ ಅಂತಹ ಸಂಪನ್ಮೂಲಗಳನ್ನು ಅವರು ತಮ್ಮ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿಸಿ ಲಾಭಗಿಟ್ಟಿಸಲೂ ಬಹುದಾಗಿದೆ. ಒಂದು ವೇಳೆ, ಉತ್ಪಾದನೆಗೇ ಆ ಸಂಪನ್ಮೂಲಗಳನ್ನು ವಿನಿಯೋಗಿಸಿದರೂ, ಮಾರುಕಟ್ಟೆಗೆ ಬೇಕಾಗುವ ಉತ್ಪಾದನೆ ಹೆಚ್ಚಿ, ಬೆಲೆಏರಿಕೆಯ ಲಾಭಗಿಟ್ಟಿಸಲೂ ಸಾಧ್ಯವಿದೆ. ಭೂಮಾಲಕರು ಮತ್ತು ಶ್ರೀಮಂತ ರೈತರು, ಬಡ್ಡಿ ಗೇಣಿ ಮತ್ತು ಲಾಭಗಳಿಂದ ಗಳಿಸುವ ಆದಾಯ ಮತ್ತು ಸಂಪತ್ತುಗಳಿಗೆ ಹೆಚ್ಚಾಗಿ ತೆರಿಗೆಗಳನ್ನೂ ಕೊಡಬೇಕಾಗಿರುವುದಿಲ್ಲ. ಶ್ರೀಮಂತರು ಕೊಬ್ಬಿದಷ್ಟೂ ಬಡರೈತರು, ಕಾರ್ಮಿಕರು ಕ್ಷಯಿಸುತ್ತಿದ್ದಾರೆ. ಶ್ರೀಮಂತರ ಬೊಕ್ಕಸ ತುಂಬುತ್ತಿದ್ದಂತೆ, ಬಡವರ ಮನೆ ಬರಿದಾಗುತ್ತಿದೆ. ಇದುವೇ ಬಂಡವಾಳಶಾಹಿ-ಭೂಮಾಲಕ ಪದ್ಧತಿಯ ಆರ್ಥಿಕ ಅಭಿವೃದ್ಧಿಯ ಪ್ರತಿಫಲ!

ಹಾಗಾದರೆ ಗ್ರಾಮೀಣ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರಗಳೇನು ? ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮದ ಘೋಷಣೆಯಲ್ಲಿ ತಿಳಿಸಿದಂತೆ, ಮೊದಲು ಭೂಸ್ವಾಮ್ಯದಲ್ಲಿನ ಗುತ್ತೇದಾರಿಯನ್ನು ಮುರಿಯಬೇಕು, ಭೂಮಿಯನ್ನು ಕೃಷಿಕಾರ್ಮಿಕರಿಗೂ ಬಡರೈತರಿಗೂ ಧರ್ಮಾರ್ಥವಾಗಿ ಹಂಚಬೇಕು, ಮತ್ತು ಅವರ ಸಾಲದ ಹೊರೆಯನ್ನು ಶಾಸನದ ಮೂಲಕ ರದ್ದು ಮಾಡಬೇಕು. ಮಿಲಿಯಾಂತರ ರೈತರ ಸೃಜನ ಶಕ್ತಿಯನ್ನೂ ದುಡಿಯುವ ಉತ್ಸಾಹವನ್ನೂ ಬಿಡುಗಡೆ ಮಾಡಲು ಮೇಲಿನ ಕ್ರಮಗಳು ಪೂರ್ಣಭಾವಿಯಾಗಿ ಅತ್ಯಗತ್ಯವಾಗಿದೆ. ಇಂತಹ ಕ್ರಮಗಳು ನಿಃಸಂದೇಹವಾಗಿ ಕೃಷಿ ಉತ್ಪಾದನೆಯು ಅದ್ಭುತವಾಗಿ ಅಭಿವೃದ್ಧಿಯಾಗಲು ಭದ್ರ ತಳಪಾಯವಾಗಿ ಪರಿಣಮಿಸುವುವು. ಗ್ರಾಮೀಣ ಪ್ರದೇಶಗಳಲ್ಲಿನ ಭೂಸಂಬಂಧ ಬದಲಾಗಿ, ಗೇಣಿ, ಬಡ್ಡಿ ಮುಂತಾದ ಪಾಳೆಯಗಾರಿ ಹಾಗೂ ಅರೆಪಾಳೆಯಗಾರಿ ಶೋಷಣೆಗಳು ಕೊನೆಗೊಂಡಾಗ, ಗ್ರಾಮೀಣ ಸಂಪನ್ಮೂಲಗಳು ನಮ್ಮ ದೇಶದ ಕೈಗಾರಿಕೆ ಮತ್ತು ಕೃಷಿ ಅಭಿವೃದ್ಧಿಗೆ ಅತ್ಯಂತ ಪ್ರಾಮುಖ್ಯವಾದ ಬಂಡವಾಳವನ್ನು ಒದಗಿಸುವುವು. (ಪು. 17-18) ಈ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಮುಖ್ಯವಾಗಿ ಗ್ರಾಮೀಣ ಬಡಕಾರ್ಮಿಕರನ್ನೂ, ಬಡರೈತರನ್ನೂ ಅವರ ಸಧ್ಯದ ಸಮಸ್ಯೆಗಳ ಆಧಾರದಲ್ಲಿ ಸಂಘಟಿಸಬೇಕು. ಈ ದಿಸೆಯಲ್ಲಿ ನಮ್ಮ ಸಾಧ್ಯತೆ ಮತ್ತು ಸಾಧನೆಗಳ ಕುರಿತು ಆತ್ಮ ಸಂಶೋಧನೆ ಮಾಡಿಕೊಳ್ಳಬೇಕು.

ಪೋಲೀಸ್ ದೌರ್ಜನ್ಯದ ಖಂಡನೆ

ತಾ. 20.6.79 ರಂದು ಮೈಸೂರು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕಛೇರಿಯಲ್ಲಿ ಸಿ.ಐ.ಟಿ.ಯು.ಗೆ ಸೇರಿದ ಕಾರ್ಮಿಕ ಸಂಘಗಳ ಸದಸ್ಯರು, ಪಾರ್ಟಿ ಹಿತೈಷಿಗಳು ಮತ್ತು ಸದಸ್ಯರುಗಳ ಸಭೆ ನಡೆಯಿತು. ಸಭೆಯಲ್ಲಿ ಹಳಿಯಾಳದಲ್ಲಿ ನಡೆದ ರೈತರ ಹೋರಾಟ ಮತ್ತು ಸರ್ಕಾರದ ದಬ್ಬಾಳಿಕೆಯನ್ನು ವಿವರಿಸಲಾಯಿತು. ಸಭೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಭೂಹೀನ ರೈತರು ನಡೆಸುತ್ತಿರುವ ಭೂಸ್ವಾಧೀನ ಚಳುವಳಿಯನ್ನು ಸ್ವಾಗತಿಸಿ ಅದಕ್ಕೆ ಬೆಂಬಲವನ್ನು ಕೋರಲಾಯಿತು.

ದಲಿತರು ನೀರು ಹಿಡಿದಿದ್ದಕ್ಕೆ ಹಲ್ಲೆ

ಕುಣಿಗಲ್ ತಾಲ್ಲೂಕು ಕೊತ್ತೀಪುರ ಗ್ರಾಮದಲ್ಲಿ ವೆಂಕಟಪ್ಪ ಉ॥ ಹೊಟ್ಟಪ್ಪನ ಮನೆಯವರು ಸರ್ಕಾರಿ ಬೋರ್ ವೆಲ್ಲಿನಲ್ಲಿ ನೀರು ತೆಗೆದುಕೊಂಡಿದ್ದಕ್ಕೆ ಊರಿನ ಕೆಲವರು (ಸವರ್ಣೀಯರು) ಮೇಲ್ಕಂಡ ಕುಟುಂಬದವರನ್ನು ಹೀನಮಾನವಾಗಿ ಹೊಡೆದು ಸಮಾಜ ಬಹಿಷ್ಕಾರ ಹಾಕಿರುತ್ತಾರೆ. ಇಂತ ಅನಾಗರೀಕ ಪದ್ಧತಿಯನ್ನು ಪ್ರತಿಭಟಿಸಿ ತಾ॥ 16.5.79ನೇ ಬುಧವಾರದಂದು ಕುಣಿಗಲ್‌ನಲ್ಲಿ ದಲಿತ ಸಂಘರ್ಷ ಸಮಿತಿಯವರು ಏರ್ಪಡಿಸಿದ್ದ ಬಹಿರಂಗಸಭೆ ಮತ್ತು ಮೆರವಣಿಗೆಯಲ್ಲಿ ಕುಣಿಗಲ್ ಬೀಡಿ ಕಾರ್ಮಿಕರೂ ಭಾಗವಹಿಸಿ, ತಹಶೀಲ್ದಾರರವರಿಗೆ ಮನವಿಪತ್ರವನ್ನು ಸಲ್ಲಿಸಿ, ದಲಿತರಿಗೆ ರಕ್ಷಣೆ ಕೊಟ್ಟು ದಬ್ಬಾಳಿಕೆ ನಡೆಸುವವರಿಗೆ ಕಾನೂನಿನ ಪ್ರಕಾರ ಶಿಕ್ಷೆಯಾಗಬೇಕೆಂದು ಒತ್ತಾಯಿಸಿರುತ್ತಾರೆ.

ಇಷ್ಟಾದರೂ ಪಿಳ್ಳಪೀಯನ ಮಗ ವೆಂಕಟೇಗೌಡ ಮತ್ತು ಚಿಕ್ಕೋನು ಎಂಬುವರು ಬೋರ್‌ವೆಲ್ಲಿನಲ್ಲಿ ನೀರು ತೆಗೆದುಕೊಳ್ಳುತ್ತಿದ್ದ ಸೇಡಿನಿಂದ ದಲಿತರ ಇನಾಮತಿ (ಕೊಡಗಿ) ಜಮೀನನ್ನು ಅಕ್ರಮವಾಗಿ ಉತ್ತು ತೊಂದರೆ ಕೊಟ್ಟಿರುತ್ತಾರೆ. ಇದರ ಬಗ್ಗೆ ವೆಂಕಟಪ್ಪ ಪೋಲೀಸಿಗೆ ದೂರು ಕೊಡಲು, ಅಧಿಕಾರಿಗಳು ಅವರನ್ನು ಸ್ಟೇಷನ್ನಿಗೆ ಕರೆತಂದು ಮಾಮೂಲಿನಂತೆ ಬಿಟ್ಟಿದ್ದಾರೆ. ಹೊರಬಂದವರು ಅವಮಾನ ಆಗಿದೆ ಎಂದು ಅವರ ಗುಂಪಿನವರಿಗೆ ತಿಳಿಸಿ ಮಾರನೆ ಬೆಳಿಗ್ಗೆ ದಲಿತ ವೆಂಕಟಪ್ಪನ ಸೊಸೆ ಕೆರೆಯಿಂದ ನೀರು ತರುತ್ತಿರುವಾಗ "ನಮ್ಮ ಜಮೀನು ಮೇಲೆ ಏಕೆ ಬರುತ್ತಿಯ ಮಾದಗಿತ್ತಿ" ಎಂದು ಹೊಡೆದಿರುತ್ತಾರೆ. ನಂತರ ಮೇಲ್ಕಂಡ ಗುಂಪಿನವರು ವೆಂಕಟಪ್ಪನ ಮನೆ ನುಗ್ಗಿ ಅವರ ಹೆಂಡತಿ ಕರಿಯಮ್ಮ ಮತ್ತು ಮಗ, ಸೊಸೆಯರನ್ನು ಹೀನಮಾನವಾಗಿ ಹೊಡೆದಿರುತ್ತಾರೆ. ನಂತರ ಹೊರಗಡೆಗೆ ಎಳೆದು ತಂದು ಹೊಡೆದು "ನೀವು ತರೋದಂಡು ತನ್ನಿ ನಾವು ನೋಡುತ್ತೀವಿ 10 ಲಕ್ಷ ಖರ್ಚಾಗಲಿ ನಿಮ್ಮನ್ನು ಉಳಿಸುವುದಿಲ್ಲ ನಿಮ್ಮ ವಂಶ ತೊಳೆಯುತ್ತೇವೆ" ಎಂದು ಸವಾಲಾಕಿರುತ್ತಾರೆ. ನೊಂದ ದಲಿತರು ಸಮಿತಿಯವರಿಗೆ ತಿಳಿಸಲು ಸಮಿತಿಯ ಕಾರ್ಯಕರ್ತರು ವೆಂಕಟಪ್ಪನ ಕುಟುಂಬದವರೊಡನೆ ಹೋಗಿ ಪೋಲೀಸಿಗೆ ದೂರು ನೀಡಿ ದೌರ್ಜನ್ಯ ಮಾಡಿರುವವರನ್ನು ಬಂಧಿಸಿ ಅವರಿಗೆ ಕಾನೂನಿನ ಪ್ರಕಾರ ಶಿಕ್ಷೆಯಾಗಬೇಕೆಂದು ದಲಿತ ಕುಟುಂಬಕ್ಕೆ ಪ್ರಾಣ ರಕ್ಷಣೆ ಕೊಟ್ಟು ಅವರು ನಿರ್ಭಯವಾಗಿ ಬೋರ್‌ವೆಲ್ಲಿನಲ್ಲಿ ನೀರು ಬಳಸುವಂತೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದರಿಂದ ದೌರ್ಜನ್ಯ ಮಾಡಿದವರನ್ನು ಬಂಧಿಸಿ ತಂದು ಮೊಕದ್ದಮೆ ದಾಖಲು ಮಾಡಿಕೊಂಡು ನಂತರ ಜಾಮೀನಿನ ಮೇಲೆ ಬಿಡಲಾಗಿದೆ.

ಅವಕಾಶವಾದವೇ ಇವರ ನಿಯಮ

ಹೈದರಾಬಾದಿನಲ್ಲಿ ಇತ್ತೀಚೆಗೆ ಸೇರಿದ್ದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು,ಕೇರಳದ ಬೆಳವಣಿಗೆಗಳ ಬಗ್ಗೆ (ಅಲ್ಲಿ ನಡೆದ ಉಪಚುನಾವಣೆಯಲ್ಲಿ ಆಡಳಿತರಂಗ ನಾಲ್ಕು ಸ್ಥಾನಗಳನ್ನೂ ಕಳೆದುಕೊಂಡಿತು) ನೀಡಿದ ಗೊತ್ತುವಳಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಗ್ಗೆ ತನ್ನ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದೆ. ಅದರಲ್ಲಿ "ಆರೆಸ್ಸೆಸ್ ನಿಯಂತ್ರಿತ ಜನತಾಪಕ್ಷದೊಡನೆ ಅವರು ಮಾಡಿಕೊಂಡಿರುವ ಅವಕಾಶವಾದಿ ಹೊಂದಾಣಿಕೆಯು, ಕೇರಳದ ಜನತೆಯ ಅಥವಾ ಇಡೀ ದೇಶದ ಹಿತಾಸಕ್ತಿಗೆ ಒಳ್ಳೆಯದಲ್ಲ" ಎಂದು ಹೇಳಲಾಗಿದೆ.

ಒಳ್ಳೆಯದು, ಒಳ್ಳೆ ನೀತಿಯೇ, ಆದರೆ ತಂಜಾವೂರು ಮತ್ತು ನಾಗಪಟ್ಟಿನಮ್ ಬಿಟ್ಟರೆ ಅದು ಒಳ್ಳೆನೀತಿಯೇ ಎಂದು ಯಾರಾದರೂ ಹೇಳಬಹುದು. ಈ ಎರಡು ಕ್ಷೇತ್ರಗಳಲ್ಲಿ ಜೂನ್ 17 ರಂದು ಲೋಕಸಭೆಗೆ ಚುನಾವಣೆ ನಡೆದಾಗ, ಕಮ್ಯುನಿಸ್ಟ್ ಪಕ್ಷವು ಜನತಾಪಕ್ಷ ಮತ್ತು ಮಾರ್ಕ್ಸ್‌ವಾದಿ ಪಕ್ಷಗಳ ಜೊತೆ, ತಂಜಾವೂರಿನಲ್ಲಿ ಡಿ.ಎಂ.ಕೆ. ಅಭ್ಯರ್ಥಿಗೂ ನಾಗಪಟ್ಟಿನಮ್‌ನಲ್ಲಿ ತನ್ನದೇ ಅಭ್ಯರ್ಥಿಗೂ ಪ್ರಚಾರ ನಡೆಸಿತು.ಇದಾದರೆ, "ಇಡೀ ದೇಶದ ಹಿತಾಸಕ್ತಿಯ" ದೃಷ್ಟಿಯಿಂದ ಮಾಡಿದ್ದು.

ಆದರೆ ಕೇರಳದಲ್ಲಿ ನಡೆದದ್ದೇನು? ತೆಲ್ಲಿಚೇರಿ ಉಪಚುನಾವಣೆಯಲ್ಲಿ ಆಡಳಿತರಂಗದ ಅಭ್ಯರ್ಥಿಯು ಕಮ್ಯುನಿಸ್ಟ್ ಪಕ್ಷದವರಾಗಿದ್ದು,ವಿರೋಧ ಪಕ್ಷವಾದ ಮಾರ್ಕ್ಸ್‌ವಾದಿ ಪಕ್ಷದ ಅಭ್ಯರ್ಥಿಯನ್ನು ಎದುರಿಸುತ್ತಿದ್ದರು,

"ಆರೆಸ್ಸೆಸ್ ನಿಯಂತ್ರಿತ ಜನತಾಪಕ್ಷದೊಡನೆ ಅವಕಾಶವಾದಿ ಹೊಂದಾಣಿಕೆ" ಯನ್ನು ಇಟ್ಟುಕೊಂಡಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಅಭ್ಯರ್ಥಿಗೆ ಪ್ರಚಾರ ಮಾಡಲು ಯಾವ ಆರೆಸ್ಸೆಸ್ ಅಂಶಕ್ಕೂ ಅವಕಾಶ ಕೊಡುವುದಿಲ್ಲವೆಂದು ಬಹಿರಂಗವಾಗಿ ಘೋಷಿಸಿತ್ತು, "ಆರೆಸ್ಸೆಸ್ ನಿಯಂತ್ರಿತ" ಜನತಾಪಕ್ಷದ ಬಗ್ಗೆ "ಪೂರ್ಣ ಮತ್ತು ನಿಯಮಯುತ ವಿರೋಧ" ವನ್ನು ಹೊಂದಿರುವ ಕಮ್ಯುನಿಸ್ಟ್ ಪಕ್ಷವು ತನ್ನ ಅಭ್ಯರ್ಥಿಗೆ ಆರೆಸ್ಸೆಸ್ ಮತಗಳೂ ಬರಲೆಂದು ಶ್ರಮಿಸಿತು.

ನಾಗಪಟ್ಟಿನಮ್ ಲೋಕಸಭಾ ಉಪಚುನಾವಣೆಯ ಬಗ್ಗೆ ಜೂನ್ 16 ರ "ಪೇಟ್ರಿಯಟ್" ಪತ್ರಿಕೆ ಒಂದು ಲೇಖನ ಕೊಟ್ಟಿದೆ. "ಕಾಂಗ್ರೆಸ್ (ಐ), ಕಮ್ಯುನಿಸ್ಟ್ ಪಕ್ಷ ಮತ್ತು ಮುಸ್ಲಿಂಲೀಗ್‌ಗಳ ನಡುವೆ ಹೊಂದಾಣಿಕೆ ತರಲು ರಾಜ್ಯದ ಹಿರಿಯ ಕಾಂಗ್ರೆಸ್(ಐ) ನಾಯಕರು ನಡೆಸಿದ ದೃಢ ಪ್ರಯತ್ನಗಳ" ಬಗ್ಗೆ ಪತ್ರಿಕೆಯ ವಿಶೇಷ ವರದಿಗಾರರು ಬರೆಯುತ್ತಾ "ಈ ಪ್ರಯತ್ನಗಳೆಲ್ಲ ನಿಷ್ಫಲವಾದವು. ಏಕೆಂದರೆ ತಾನು ಶ್ರೀಮತಿ ಇಂದಿರಾ ಗಾಂಧಿಯವರ ಸರ್ವಾಧಿಕಾರಿ ನಾಯಕತ್ವವನ್ನು ವಿರೋಧಿಸುವುದರಿಂದ ಅವರ ಪಕ್ಷದ ಜೊತೆ ಸೇರುವುದಿಲ್ಲ ಎಂದು ಕಮ್ಯುನಿಸ್ಟ್ ಪಕ್ಷ ಹೇಳಿತು" ಎಂದು ತಿಳಿಸುತ್ತಾರೆ.

ಒಳ್ಳೆಯದು, ತುಂಬಾಸಂತೋಷ, ಒಳ್ಳೆನೀತಿಯೇ, ಸರ್ವಾಧಿಕಾರ ಮತ್ತು ಕಾಂಗ್ರೆಸ್(ಐ)ಅನ್ನು ವಿರೋಧಿಸುವುದು ಒಳ್ಳೆಯದೇ, ಆದರೆ... ಎಂದು ಮತ್ತೆ ಯಾರಾದರೂ ಹೇಳಬಹುದು.

ಕೆಲವುದಿನಗಳ ಹಿಂದೆ ನಡೆದ ಫಿರೋಜ್‌ಪುರ ಲೋಕಸಭಾ ಉಪಚುನಾವಣೆಯಲ್ಲಿ ಫಜಿಲ್ಕ ವಿಭಾಗದಲ್ಲಿ ಮತದಾನ ತಡೆಹಿಡಿದದ್ದು ಬಿಟ್ಟರೆ ಇದು ಒಳ್ಳೆನೀತಿಯೇ:

ಇಲ್ಲಿ ಕಮ್ಯುನಿಸ್ಟ್ ಪಕ್ಷವು ಕಾಂಗ್ರೆಸ್(ಐ) ಜೊತೆ ಸೇರಿ ಅಕಾಲಿದಳದ ಅಭ್ಯರ್ಥಿಯನ್ನು ವಿರೋಧಿಸಿತ್ತು.

ಕೇರಳದಲ್ಲಿ ಬಾಯಿಮಾತಿನಲ್ಲಿ "ಆರೆಸ್ಸೆಸ್ ನಿಯಂತ್ರಿತ" ಜನತಾಪಕ್ಷವನ್ನು ವಿರೋಧಿಸಿ, ಕಾರ್ಯದಲ್ಲಿ ಆರೆಸ್ಸೆಸ್ ಮತಗಳಿಗೆ ಹಾರೈಸುವುದು:

ನಾಗಪಟ್ಟಿನಮ್ ಮತ್ತು ತಂಜಾವೂರುಗಳಲ್ಲಿ ಜನತಾಪಕ್ಷದ ಜೊತೆ ಸೇರಿ ಅಣ್ಣಾ ಡಿ: ಎಂ. ಕೆ. ಮತ್ತು ಕಾಂಗ್ರೆಸ್(ಐ) ಗಳನ್ನು ವಿರೋಧಿಸುವುದು ;

ಫಿರೋಜ್‌ಪುರದಲ್ಲಿ ಅಕಾಲಿದಳದ ವಿರುದ್ಧ ಕಾಂಗ್ರೆಸ್(ಐ) ಜೊತೆ ಸೇರುವುದು.

ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿರುವುದು ಒಂದೇ ಒಂದು ನಿಯಮ: ಅವಕಾಶವಾದ.

.....ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ :

[ಒಂದನೇ ಪುಟದಿಂದ]

ಶಿಸಿ) ನಮ್ಮನ್ನು ದೂರವಿಟ್ಟಿಲ್ಲ. ವರ್ಗಹಿತವನ್ನು ಬಲಿಕೊಡದೆ, ಕ್ರಾಂತಿಕಾರಿ ಪಥವನ್ನನುಸರಿಸುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೊಂದೇ ನಿಜವಾದ ಕಮ್ಯುನಿಸ್ಟ್ ಪಕ್ಷ. ಆದುದರಿಂದಲೇ ನಾವೆಲ್ಲಾ ಅದನ್ನು ಸೇರಿ ಬಲಪಡಿಸಬೇಕೆಂದು ಘೋಷಿಸಿದರು. ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅವರು ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳೊಳಗಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಬಗ್ಗೆ ವಿಶ್ಲೇಷಿಸಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿಲುಮೆ ಸರಿಯೆಂಬುದನ್ನು ಚರಿತ್ರೆಯೇ ತೋರಿಸಿಕೊಟ್ಟಿದೆ ಎಂದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ. ಕ. ಜಿಲ್ಲಾ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಅವರು ಸಿ. ಪಿ. ಐ. ಸದಸ್ಯರು ಮತ್ತು ಬೆಂಬಲಿಗರಾಗಿದ್ದವರು ಈಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಬರುವುದನ್ನು ಸ್ವಾಗತಿಸುತ್ತಾ, ವರ್ಗಹೋರಾಟವನ್ನು ಬೆಳೆಸಲು ಕರೆಯಿತ್ತರು. ಒಂದೊಂದು ಪರಿಸ್ಥಿತಿಯಲ್ಲಿ ಬಂಡವಾಳಶಾಹಿ ಪಕ್ಷಗಳಿಗೆ ಬೆಂಬಲಕೊಡಬೇಕಾಗಿ ಬಂದರೂ, ಸ್ವಂತ ವರ್ಗಆಧಾರಿತ ಶಕ್ತಿ ಬೆಳೆದರೆ ಮಾತ್ರ ಕ್ರಾಂತಿಕಾರಿ ಪಥದಲ್ಲಿ ಮುಂದೆ ಹೋಗುವುದು ಸಾಧ್ಯ ಎಂದರು.

ಸಿ. ಪಿ. ಐ. ಮುಂದಾಳುಗಳಾಗಿದ್ದ ಕಾಂ. ಡಿಸೋಜ, ಕಾಂ. ರುಕ್ಮಯ್ಯ ಪೂಜಾರಿ ಮೊದಲಾದವರೂ ಸಭೆಯಲ್ಲಿ ಭಾಗವಹಿಸಿದ್ದರು. ಕಾಂ. ವೈ. ಎಸ್. ಭಟ್ ಸ್ವಾಗತ ಭಾಷಣ ಮಾಡಿದ್ದರು. ಕಾಂ. ಬಿ. ನಾರಾಯಣ ಧನ್ಯವಾದ ಅರ್ಪಿಸಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಹೀಗಳೆಯುತ್ತಾ, ರಾಜ್ಯದಲ್ಲಿ ಜನತೆಯು ಭಾರತ ಕಮ್ಯುನಿಸ್ಟ್ ಪಕ್ಷದತ್ತ ನೋಡುತ್ತಿದೆ ಎಂದು ಕೆಂಬಾವುಟದಲ್ಲಿ ಈ ಹಿಂದೆ ಕೊಚ್ಚಿಕೊಂಡಿರುವ ಬಲ ಕಮ್ಯುನಿಸ್ಟರ ಬಲಿಷ್ಟ ಕೇಂದ್ರವಂದಿದ್ದ ಬಂಟ್ವಾಳದಲ್ಲಿನ ಬೆಳವಣಿಗೆಯೇ ಅವರಿಗೆ ಸರಿಯಾದ ಉತ್ತರಕೊಟ್ಟಿದೆ.

○

......ರೈತ ಸಂಘದ ಕರೆ

[ಒಂದನೇ ಪುಟದಿಂದ]

ತಿಯು, ಪ್ರತಿಬಂಧಕಾಜ್ಞೆಯನ್ನು ಕೂಡಲೇ ಹಿಂತೆಗೆಯುವಂತೆಯೂ, ಬಂಧನಕ್ಕೊಳಗಾದವರ ಮೇಲಿನ ಮೊಖದ್ದಮೆಗಳನ್ನು ಹಿಂತೆಗೆಯುವಂತೆಯೂ, ಮೃತರಕುಟುಂಬಕ್ಕೆ ಪರಿಹಾರ ಒದಗಿಸುವಂತೆಯೂ ಬಡರೈತರ ಮೇಲಿನ ಪೋಲೀಸ್ ದಬ್ಬಾಳಿಕೆ ನಿಲ್ಲಿಸುವಂತೆಯೂ ಸರಕಾರವನ್ನು ಒತ್ತಾಯಿಸಿತು.

ಹಳ್ಳಿಯ ಬಡ ಜನರು ಅನುಭವಿಸುತ್ತಾ ಬಂದಿರುವ ಸರಕಾರಿ ಭೂಮಿಯನ್ನು ಕೂಡಲೇ ಖಾಯಂಗೊಳಿಸಬೇಕು; ಕೃಷಿಯೋಗ್ಯ ಸರಕಾರಿ ಬಂಜರು ಭೂಮಿ ಮತ್ತು ಅರಣ್ಯ ಭೂಮಿ ಹಾಗೂ ದೊಡ್ಡ ಪ್ಲಾಂಟೇಷನ್ ಮಾಲಕರೂ, ಭೂಮಾಲಕರೂ ಅಕ್ರಮವಾಗಿ ಸ್ವಾಧೀನ ಇಟ್ಟಿರುವ ಸರಕಾರಿ ಭೂಮಿಯನ್ನೂ ಭೂಹೀನರಿಗೆ ಹಂಚಬೇಕು ಎಂದು ಸರಕಾರವನ್ನು ಒತ್ತಾಯಿಸಿದ ಸಮಿತಿಯು ಈ ಬೇಡಿಕೆಗಳಿಗಾಗಿ ರಾಜ್ಯದಾದ್ಯಂತ ಭೂಸ್ವಾಧೀನ ಚಳುವಳಿಯನ್ನು ನಡೆಸಲು ಕರೆಯಿತ್ತಿತು.

ಯಾವುದೇ ಸಾಲಗಳಿಗಾಗಿ ಬಡ ರೈತರ ಭೂಮಿಯನ್ನು ಜಪ್ತಿ ಮಾಡಬಾರದೆಂಬ ನಿರ್ಣಯವನ್ನು ಮಾಡಿದ ಸಮಿತಿಯು ಈ ಬಗ್ಗೆ ಹೋರಾಡಲು ತೀರ್ಮಾನಿಸಿತು. ಸಾಧ್ಯವಾದಲ್ಲೆಲ್ಲಾ ಕೃಷಿ ಕೂಲಿಗಾರರ ಸಂಘಟನೆ ಕಟ್ಟಲೂ ತೀರ್ಮಾನಿಸಲಾಯ್ತು. ರೈತಸಂಘದ ರಾಜ್ಯ ಸಮಿತಿಗೆ ನಿಧಿಯೆತ್ತಲೂ ತಿರ್ಮಾನಿಸಲಾಯ್ತು.

29ರ ಸಂಜೆ ಕಾರ್ಯಕಾರಿ ಸಮಿತಿ ಸದಸ್ಯರು ಮಾರುತಿ ಪವಾರ್ ಅವರ ಪತ್ನಿ ಮತ್ತು ಮಕ್ಕಳನ್ನು ಭೆಟ್ಟಿಯಾಗಿ ಸಂತಾಪ ಸೂಚಿಸಿದರು. ಹಳಿಯಾಳ ಹೋರಾಟದ ಹಿನ್ನೆಲೆಯಲ್ಲಿ ಸೇರಿದ್ದ ರಾಜ್ಯ ಸಮಿತಿಗೆ ಹಳಿಯಾಳ ರೈತರ ದೃಢತೆ, ಹೋರಾಟದ ಮನೋಭಾವ ಮತ್ತು ಆತ್ಮೀಯತೆಗಳು ಹೊಸ ಸ್ಫೂರ್ತಿಯನ್ನಿತ್ತಿವೆ.

○

ಕೇರಳದಲ್ಲಿ ವಿದ್ಯಾರ್ಥಿಗಳ ಚಳುವಳಿ

ಜೂನ್ 29 ರಂದು ರಾಜ್ಯಾದ್ಯಂತ ಎಸ್.ಎಫ್.ಐ. ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಸರ್ಕಾರಿ ಕಛೇರಿಗಳ ಮುಂದೆ ಪಿಕೆಟಿಂಗ್ ನಡೆಸಿದರು. ಶಾಲಾಕಾಲೇಜುಗಳಲ್ಲಿ ಹೆಚ್ಚಿನ ಸ್ಥಳಾವಕಾಶ ಒದಗಿಸಬೇಕು, ಪದವಿ ತರಗತಿಯವರೆಗೆ ಉಚಿತ ಶಿಕ್ಷಣ ನೀಡಬೇಕು, ವಿದ್ಯಾರ್ಥಿಗಳಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಮುಂತಾದವು ಮುಖ್ಯ ಬೇಡಿಕೆಗಳಾಗಿದೆ.

○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಪರಿಸರ

ಸ್ಥಾನಬದ್ಧತಾ ಕಾನೂನನ್ನು ಪುನರುಜ್ಜೀವನಗೊಳಿಸಲು ಕೇಂದ್ರವು ಪ್ರಯತ್ನಿಸುವುದೇ ಆದರೆ ನಮ್ಮ ಪಕ್ಷ ಅದನ್ನು ಸಂಪೂರ್ಣವಾಗಿ ವಿರೋಧಿಸುವುದು.

—ಜ್ಯೋತಿ ಬಸು.

ಆರ್.ಎಸ್.ಎಸ್. ಮತ್ತಿತರ ಮತೀಯ ಸಂಸ್ಥೆಗಳನ್ನು ಬಹಿಷ್ಕರಿಸುವ ಅಗತ್ಯವಿಲ್ಲ. ಆದರೆ ಅವುಗಳ ಬಗ್ಗೆ ಜನತೆಗೆ ತಿಳುವಳಿಕೆ ನೀಡಬೇಕಿದೆ.

—ಇಂದಿರಾಗಾಂಧಿ.

ಜನತಾಪಕ್ಷವು ದೇಶದಲ್ಲಿ ಉಂಟುಮಾಡಿರುವ ಅರಾಜಕ ಪರಿಸ್ಥಿತಿಯಲ್ಲಿ ಸೇನೆಯು ಆಡಳಿತವನ್ನು ಕೈಗೆತ್ತಿಕೊಳ್ಳದೆ ಬೇರೆ ಉಪಾಯವೇ ಇಲ್ಲ.

ಕಮಲಾಪತಿ ತ್ರಿಪಾಠಿ.

ಕಳೆದೆರಡು ವರ್ಷಗಳಿಂದ ಪ. ಬಂಗಾಳದಲ್ಲಿ ಸಿ.ಪಿ.ಐ. (ಎಂ) ಗುಡ್ಡಗಾಡುಗಳಲ್ಲೂ ಮತ್ತು ಕೃಷಿಕಾರ್ಮಿಕರ ಮಧ್ಯೆ "ಕೆಲಸಕ್ಕಾಗಿ ಆಹಾರ" ಕಾರ್ಯಕ್ರಮವನ್ನು ಮುಂದಿನ ಮೂರು ವರ್ಷಗಳಲ್ಲೂ ಮುಂದುವರಿಸಿದರೆ. ಅದನ್ನು ಸಿ.ಪಿ.ಐ. (ಎಂ)ನ್ನು ಜನಮನದಿಂದ ದೂರೀಕರಿಸಲು ಅಸಾಧ್ಯವಾಗುವುದು.

ಸಂಡೆ ವರದಿಯೊಂದರಿಂದ.

ತಮಿಳುನಾಡಿನಲ್ಲಿ ಮೇ 5ರಿಂದ 1,50,000 ಟೆಕ್ಸ್‌ಟೈಲ್ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಚಳುವಳಿ ಹೂಡಿದ್ದಾರೆ. ಅವರಲ್ಲಿ ಇಲ್ಲಿಯವರೆವಿಗೆ 700 ಕಾರ್ಮಿಕರನ್ನು ಬಂಧಿಸಲಾಗಿದೆ.

ಇಂಡಿಯನ್ ಎಕ್ಸ್‌ಪ್ರೆಸ್, ಜೂನ್ 30.

ಭಾರತದಲ್ಲಿ ಕಾರ್ಯನಡೆಸುವ ಬಹುರಾಷ್ಟ್ರೀಯ ಸಂಸ್ಥೆಗಳು ಹೊರದೇಶಗಳೊಡನೆ ಭಾರತದೇಶವು ನಡೆಸುವ ವಿನಿಮಯದಲ್ಲಿ 2,200 ಮಿಲಿಯ ರೂಪಾಯಿಗಳನ್ನು ಉಪಯೋಗಿಸಿಕೊಳ್ಳುತ್ತಿದೆ.

ಯು. ಎನ್. ಐ., ಮೇ 31.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.